
# ಅಖಿಲ ಭಾರತ ಪತ್ರಿಕೆ

## ಏಪ್ರಿಲ್ 2020

# ಶಾಶ್ವತದ ಆಗಮನ

ಬೆಲೆ : 15/-



ಈ ಲೋಕವೀಗ ಘನಘೋರ ತಮಕೆ ಸಿಲುಕಿ ಬಿರುಬೇಗೆಯಲ್ಲಿ
ಧಗೆಯಿದುವು ನಿರತ ಅನುತಾಪ ಸತತ ಇರಲಿರುವ ಘಳಿಗೆಯಲ್ಲಿ
ಊಹನೆಗು ಸಿಗದ ಘಟನೆಗಳು ಸತತ ಖುರಪುಟದ ನೆಗೆತ ಸತತ
ರಭಸಲದಿ ನುಗ್ಗಿ ಬರಲಿರುವ ವಾಯು–ವೇಗದಲಿ ಧ್ವನಿಯ ಸೆಳೆತ

ಈ ಭುವಿಗೆ ಇಂದು ಬೆಚ್ಚಿಸುವ ಕ್ರಂದ–ಆಕ್ರಂದದೇರು ಭರತ
ದಟ್ಟೈಸಿ ಬರುವ ಆ ಕೂಗು–ಮಾರಿ, ಕಿವಿಗೊಟ್ಟು ಬರುವನೀತ
ಅತಿರಥನ ತೆರದಿ ಬಂದ, ಅತಿಮಾನವನ ಸಹನೆ ಧರಿಸಿಕೊಂಡು
ಸ್ಥಿತಪ್ರಜ್ಞನಾಗಿ ಮೌನದೌನ್ನತ್ಯ ದೇವನೆಡೆ ಮರಳಿ ಇಂದು

**– ಪುಟ್ಟು ಕುಲಕರ್ಣಿ**

**(ಶ್ರೀ ಅರವಿಂದರ 'ಸಾವಿತ್ರಿ'; ದಳ 1 ರೇಣು 3 ಪುಟ 53/54)**

Photo: Imaging Savitri

| **ಅಖಿಲ ಭಾರತ ಪತ್ರಿಕೆ**<br>**ಏಪ್ರಿಲ್ 2020** | ಸಂಪುಟ: 30 ಸಂಚಿಕೆ: 04<br>**ಪರಿವಿಡಿ** |
|---|---|



**ಸಂಪಾದಕರು:**
ಶ್ರೀ ಪುಟ್ಟು ಕುಲಕರ್ಣಿ
ರಾಘವೇಂದ್ರ ಮಠದ ಹಿಂಭಾಗ,
ಗಿಬ್ ಸರ್ಕಲ್, ಹೆರವಟ್ಟ ರಸ್ತೆ,
ಕುಮಟಾ – 581 343.
ಫೋನ್: 94487 74920
editorabpbng@yahoo.com



**ಪರಿಶೀಲನಾ ಸಮಿತಿ**
ಡಾ॥ ಗುರುಲಿಂಗ ಕಾಪ್ಸೆ
ಡಾ॥ ಆರ್.ಕೆ. ಕುಲಕರ್ಣಿ



**ಪ್ರಕಾಶಕರು:**
ಡಾ॥ ಅಜಿತ್ ಸಬ್ನೀಸ್
ಅಧ್ಯಕ್ಷರು, ಶ್ರೀ ಅರವಿಂದೋ
ಸೊಸೈಟಿ ರಾಜ್ಯ ಸಮಿತಿ ಕರ್ನಾಟಕ,
ಶ್ರೀ ಅರವಿಂದ ಮಾರ್ಗ,
ಜೆ.ಪಿ. ನಗರ ಮೊದಲನೇ ಹಂತ,
ಬೆಂಗಳೂರು – 560 078.

**ಪ್ರಾಯೋಜಕರು:**
ಶ್ರೀ ಅರವಿಂದೋ ಕಾಂಪ್ಲೆಕ್ಸ್ ಟ್ರಸ್ಟ್ (ರಿ.)
ಜೆ.ಪಿ. ನಗರ ಮೊದಲನೇ ಹಂತ,
ಬೆಂಗಳೂರು – 560 078.
ಫೋನ್: 080 – 2244 9882
http://abp.sirinudi.org

**ಡಿ.ಟಿ.ಪಿ.:**
ಗಣಕಯಂತ್ರ ಕೇಂದ್ರ
ಶ್ರೀ ಅರವಿಂದೋ ಕಾಂಪ್ಲೆಕ್ಸ್ ಟ್ರಸ್ಟ್ (ರಿ.)
ಜೆ.ಪಿ. ನಗರ ಮೊದಲನೇ ಹಂತ,
ಬೆಂಗಳೂರು – 560 078.

**ಆಫ್‌ಸೆಟ್ ಮುದ್ರಣ:**
ಶೇಷಸಾಯಿ ಇ ಫಾರ್ಮ್ಸ್ ಪ್ರೈ.ಲಿ.
ಶ್ರೀ ಅರವಿಂದೋ ಕಾಂಪ್ಲೆಕ್ಸ್ ಟ್ರಸ್ಟ್ (ರಿ.)
ಜೆ.ಪಿ. ನಗರ ಮೊದಲನೇ ಹಂತ,
ಬೆಂಗಳೂರು – 560 078.


## “ಶಾಶ್ವತದ ಆಗಮನ”

ಜಡತ್ವದಲ್ಲಿ ದೈವತ್ವದ ಆವಿಷ್ಕಾರ. – ಶ್ರೀ ಅರವಿಂದರು


**ದರ್ಶನದ ಸ್ಪಂದಗಳು** 5
ಅನು: ಶ್ರೀ ಮಂದರ್ಕೆ ಮಾಧವ ಪೈ
ಶ್ರೀ ಪುಟ್ಟು ಕುಲಕರ್ಣಿ
ಪ್ರೊ. ವೀರಭದ್ರಪ್ಪ ಕೆ.

**ಸ್ಮರಣೆಗಳು** 22
ಅನು: ನಾಗಜ್ಯೋತಿ ಯಲಿವಾರ

**ಶ್ರೀ ಮಾತೆಯವರಿಗೆ ಶ್ರೀ ಅರವಿಂದರ ಪತ್ರಗಳು** 27
ಅನು: ಡಾ॥ ಮಹಾದೇವ ಸಕ್ರಿ

**ಶ್ರೀ ಅರವಿಂದರು – ಶತಮಾನದ ನೋಟ** 36
(ಮುಂದುವರೆದ ಭಾಗ – 3)
– ಶ್ರೀ ನವನೀತ ರಾಮಚಂದ್ರರಾಯರು

## ಸಂಪಾದಕರ ಟಿಪ್ಪಣಿ

ಶ್ರೀಮಾತೆಯವರು ಇಲ್ಲಿಯೇ (ಪಾಂಡಿಚೇರಿಯಲ್ಲಿಯೇ) ಖಾಯಂ ಆಗಿ ನೆಲೆಸಲು ಬಂದ ಸಮಯದ ಶತಮಾನದ ಅವಧಿಯಿದು. ಏಪ್ರಿಲ್ 24, 1920 ರಂದು ಎರಡನೇ ಬಾರಿಗೆ ಭಾರತಕ್ಕೆ (ಪಾಂಡಿಚೇರಿಗೆ) ಬಂದ ನಂತರದಲ್ಲಿ ಅವರು ಮತ್ತೆ ಫ್ರಾನ್ಸಗೆ ಹೋಗಲಿಲ್ಲ. ಹೀಗಾಗಿ ಈ ದಿನವನ್ನೇ 'ದರ್ಶನದ ದಿನ'ವೆಂದು ಆಚರಣೆ ಮಾಡಲಾಗುತ್ತಿದೆ. ಈ ಒಂದು ಶತಮಾನದ ಅವಧಿಯಲ್ಲಿ, ಈ ಭೂಮಿಯ ವಾತಾವರಣದಲ್ಲಿ, ಜೀವನದಲ್ಲಿ ಗಮನಾರ್ಹವಾದ ಘಟನೆಗಳು ಘಟಿಸಿವೆ. ಅದರಲ್ಲೂ ಪ್ರಮುಖವಾಗಿ ರೂಪಾಂತರಣಗಳಂತಹ ಅತ್ಯಪರೂಪದ ಸಂಗತಿಗಳೂ ಮಹತ್ವಪೂರ್ಣವಾಗಿವೆ. ಹೀಗಾಗಿ ಈ ಶತಮಾನವು ತನ್ನದೇ ಆದ 'ಅಸ್ಮಿತೆ'ಯನ್ನು ಹೊಂದಿದೆ. ಇದರ ಸಲುವಾಗಿಯೇ ಶ್ರೀಮಾತೆಯವರು 'ಸುಸ್ಪಷ್ಟವಾಗಿಯೇ ಸಾಕಾರಗೊಂಡು ದರ್ಶನವಾಗುತ್ತಿರುವ ರೂಪಾಂತರಣಗಳ ಸಂಕೇತವನ್ನು ಹಾಗೂ ಮುಖ್ಯವಾಗಿ ವಿಘ್ನಕಾರಕ ಶಕ್ತಿಗಳ ಮೇಲೆ ಸಮರ್ಥನೀಯವಾದ ನಿಯಂತ್ರಣವನ್ನು ಸಾಧಿಸಿದ ಮತ್ತು ವಿಜಯ ಪ್ರಾಪ್ತಿ ಮಾಡಿಕೊಂಡ ಅವಧಿ' ಇದಾಗಿದೆ ಎಂದೇ ಹೇಳಿದ್ದಾರೆ. [ಎಐಎಮ್]

*

## ಸಂಪಾದಕೀಯ

### ಮಹಾಕಾಳಿಯ ಪದದ ಅಬ್ಬರಗಳು – ವಿಕಾಸದ ಮುನ್ನುಡಿ

ಮಹಾಕಾಳಿಯ ಪದದ ಅಬ್ಬರಗಳು ಪರಾಕಾಷ್ಠೆಯನ್ನು ತಳೆದಿರುವ ದಾರುಣದ ಘಟನೆಗೆ ಈ ಅವಧಿ ತಲ್ಲಣಗೊಳ್ಳುತ್ತಿದೆ. ಇಡೀ ಜಗತ್ತಿನ ಮಾನವ ಕುಲದ ಜೀವನವೇ ಅಲ್ಲೋಲ–ಕಲ್ಲೋಲಗೊಂಡಿದೆ. ಭರವಸೆಯ ಕಿರಣ ಯಾವ ಬದಿಯಿಂದ ಬರುವದು ಎನ್ನುವದರ ಬಗೆಗೂ ಸಂಕೇತಗಳು ಕಾಣದಂತಹ ಹತಾಶ ಸ್ಥಿತಿ ತುಂಬಿಕೊಂಡಿದೆ. ಕಾಳಿಯ ಈ ಪದದ ಅಪ್ಪಳಿಸುವಿಗಳಿಂದಾಗಿ ಪ್ರಳಯವೇ ಸಂಭವಿಸುತ್ತಿದೆಯೇನೋ ಎನ್ನುವ ಭಯವೂ ತುಂಬಿಕೊಂಡಿದೆ.

ಆದರೆ ಶ್ರೀಮಾತೆಯ ಪ್ರತಿಯೊಂದು ಕ್ರಿಯೆಯೂ ವಿಕಾಸಕ್ಕೆ ಇರುತ್ತದೆಯೇ ವಿನಾ ವಿನಾಶಕ್ಕಲ್ಲ. ಈ ರೀತಿಯ ಘೋರ ಅನುಭವದ ಮೂಲಕವೇ ಶ್ರೀಮಾತೆಯು ನಮಗೆ ಪಥ ನಿರ್ದೇಶನ ಮಾಡುತ್ತಿದ್ದಾಳೆ. ವಾತ್ಸಲ್ಯಮಯೀ ಶ್ರೀಮಾತೆ ಕೋಪಗೊಂಡರೂ ಸಹಿತ, ಶಿಕ್ಷೆ ಕೊಡುವ ಅನಿವಾರ್ಯತೆ ಬಂದರೂ, ತನ್ನ ಮಕ್ಕಳು ಸಂಪೂರ್ಣ ಅಸ್ತಿತ್ವ ಕಳೆದುಕೊಳ್ಳಬೇಕೆಂದು ಎಂದಿಗೂ ಇಚ್ಛಿಸುವದಿಲ್ಲ. ಪಥ ವಿಚಲನೆಗೊಂಡ ಪ್ರಯಾಣದಲ್ಲಿ ಶಕೆಯ ಮೂಲಕವೇ ಶಿಕ್ಷಣ ಕೊಡಬೇಕಾದ ಅನಿವಾರ್ಯತೆಯನ್ನು ಲೌಕಿಕವು ಸೃಷ್ಟಿಸಿಕೊಂಡಿರುತ್ತದೆಯೇ ವಿನಾ, ಅದು ಎಂದಿಗೂ ಶ್ರೀಮಾತೆಯ ಆಶಯವಾಗಿರುವದಿಲ್ಲ. ಪಥದಿಂದ ಸ್ವಲ್ಪವೇ ದೂರ ಹೋದಾಗಲೇ, ಶ್ರೀಮಾತೆಯು ಕೃಪೆಯಿಂದ ಸೂಕ್ತ ದಾರಿಗೆ ಬರಲು ಉಪದೇಶಿಸುತ್ತಾಳೆ; ಈ ಸಣ್ಣ ವಿಚಲನೆಯೂ ಮಹಾ ಪತನಕ್ಕೆ ಕಾರಣವಾಗಬಾರದೆಂದು ನಸು ಕೋಪದಿಂದಲೇ ಎಚ್ಚರಿಸಿದಾಗಲೆಲ್ಲ ಈ ರೀತಿಯ ಪ್ರಳಯ ಸದೃಶ ಘಟನೆಗಳು ಘಟಿಸುತ್ತವೆ. ಅದು ಅನಿವಾರ್ಯವೂ ಆಗಿರುತ್ತದೆ. ಇದನ್ನರಿಯದ ಮಾನವ ತಲ್ಲಣ–ಬೇಗುದಿಗಳಲ್ಲಿ ಬೇಯುತ್ತಾನೆ; ಮತ್ತೆ ಶ್ರೀಮಾತೆಯ ಕೃಪೆಗಾಗಿ ಹಂಬಲಿಸತೊಡಗುತ್ತಾನೆ.

ಪುನರುತ್ಥಾನವನ್ನು ಎಂದಿಗೂ ತಪ್ಪಿಸಲು ಸಾಧ್ಯವಿಲ್ಲ. ವಿಕಾಸದ ಪ್ರಕ್ರಿಯೆಯಲ್ಲಿ – ಅದು ಉತ್ಕ್ರಾಂತಿಯ ಸ್ವರೂಪದ್ದೇ ಆಗಿದ್ದರೂ ಸಹಿತ, ಮಧ್ಯೆ ಮಧ್ಯೆ 'ಕ್ರಾಂತಿ'ಕಾರಕ ಘಟನೆಗಳು, ಈ ಉತ್ಕ್ರಾಂತಿಯ ವೇಗವನ್ನು ತಡೆಯಲ್ಲಿ ಇನ್ನಿಲ್ಲದ ಅಬ್ಬರವನ್ನು ಸೃಷ್ಟಿಸುತ್ತವೆ. ಆದರೆ ನಿಯತಿಯ ಆಣತಿಯಂತೆ ನಿರ್ದಿಷ್ಟವಾದ ಉತ್ಕ್ರಾಂತಿಯ ಪಥವು, ಪುನರುತ್ಥಾನಕ್ಕಾಗಿಯೇ ರೂಪುಗೊಂಡಿರುತ್ತದೆ. ಆಧುನಿಕ, ವೈಜ್ಞಾನಿಕ ಆಯಾಮಗಳಲ್ಲಿ, ಭೌತಿಕ ಪ್ರಪಂಚದ ಯಾಂತ್ರಿಕ ಸುಖೋಪಭೋಗಗಳ

ಪರಾಕಾಷ್ಠೆಯಲ್ಲಿ, ನಮ್ಮ ಈ ವಿಚಲನದ ಹಾದಿ 'ಭಯಾವಹ'ವಾಗಿರುವದು ಸಹಜವಾಗಿರುತ್ತದೆ. ಭ್ರಾಂತಿ–ಭ್ರಾಂತಿಗಳ ತುಕಡಿಗಳನ್ನೇ ಕಟ್ಟಿಕೊಂಡು ಅಂಧರಾಗಿ, ನಿಯತಿಯನ್ನೂ ಮೀರಿದ್ದೇವೆ ಎಂದು ಜಯಭೇರಿ ಬಾರಿಸುತ್ತೇವೆ. ಕಾಲ–ಮಿತಿಯನ್ನು ಮರೆತು, ನಿದಿತ ಗಡಿ–ಗೋಡೆಗಳನ್ನೂ ಹುಡಿಗುಟ್ಟಿಸಿ, ಇಡೀ ಲೋಕವನ್ನೇ ನುಂಗಿ ನೊಣೆಯುವ ಝಂಝಾವಾತವನ್ನು ಸೃಷ್ಟಿಸತೊಡಗಿದಾಗ, ರಣಭೇರಿಗೆ ಲೋಕವೆಲ್ಲವನ್ನೂ ಕಣ್–ಕಣ್ ಬಿಡುವಂತೆ ಮಾಡಿದಾಗ, ಇಡೀ ಮಾನವ ಕುಲವೇ ದಹಿಸಿ ಹೋಗುವ ಸಂದರ್ಭ ಬಂದಾಗ, ಶ್ರೀಮಾತೆಯು ಸಹಜವಾಗಿಯೇ ತನ್ನ ಕೋಪವನ್ನು ತೋರ್ಪಡಿಸಲೇ–ಬೇಕಾಗುತ್ತದೆ.

ಆದರೆ ಇಂತಹ ತಲ್ಲಣದ ಸಮಯದಲ್ಲಿಯೇ ಹೊಸ ಆಶಾ ಕಿರಣದ ಭರವಸೆಯೂ ಅಡಗಿರುತ್ತದೆ. ಅದು ಗೋಚರಕ್ಕೂ ಬರುತ್ತದೆ. ಹೃದಯವನ್ನೇ ದಿಗ್ಬಂಧಗೊಳಿಸುವಂತಹ ರಕ್ಕಸ ಶಕ್ತಿ ಇದ್ದರೂ, ಜಾಗ್ರತಿಯ ಕ್ರಿಯೆಗಳು ಮತ್ತೆ ಆತ್ಮಶಕ್ತಿಯನ್ನು ಉದ್ದೀಪನಗೊಳಿಸುತ್ತವೆ, ನವಯುಗಕ್ಕೆ ನಾಂದಿ ಹಾಡುತ್ತವೆ. ಆ ವಿಷಣ್ಣ ಪರಿಸ್ಥಿತಿಯಿಂದ ಯಶಸ್ವಿಯಾಗಿ ಹೊರಬರುವ ದಾರಿಯನ್ನೂ ಶ್ರೀಮಾತೆಯೇ ತೋರುತ್ತಾಳೆ. ಅವಳ ಹಿತೋಪದೇಶಗಳನ್ನು ಆತ್ಮಪೂರ್ವಕವಾಗಿ ಅನುಷ್ಠಾನಿಸಲು ಸಿದ್ಧರಾದಲ್ಲಿ, ಈ ಪ್ರಳಯಕಾರೀ ಘಟನೆಗಳೇ "ನವಯುಗಕ್ಕೆ" ಬರೆದ ಮುನ್ನುಡಿಯಾಗುತ್ತವೆ.

ಇದರ ಸಂಕೇತವೆನ್ನುವಂತೆಯೇ, ಶ್ರೀ ಮಂದರ್ಕೆ ಮಾಧವ ಪೈ ರಚಿಸಿರುವ, ಶ್ರೀ ಅರವಿಂದರ ಮಹಾನ್ ಕಾವ್ಯ 'ಸಾವಿತ್ರಿ'ಯ ಕನ್ನಡದ ರೂಪಾಂತರಣಕ್ಕೆ ಕರ್ನಾಟಕ ಸರ್ಕಾರದ ಸಾಹಿತ್ಯ ಅಕಾಡೆಮಿಯಿಂದ 2018ರ ಸಾಲಿನ "ಭಾರತೀಯ ಭಾಷಾ ಅನುವಾದದ ಪುರಸ್ಕಾರ" ಸಂದಿದೆ. ಹಸ್ತಪ್ರತಿಯಲ್ಲಿಯೇ 40 ಕ್ಕೂ ಮಿಕ್ಕಿದ ವರ್ಷಗಳ ಕಾಲ ಸುದೀರ್ಘ ತಪಸ್ಸು ಮಾಡುತ್ತಿದ್ದ ಈ ಕೃತಿ, ಅವರ ಜೀವಮಾನದ ಸಾಧನೆಗೆ, ಹಾಗೂ ಕನ್ನಡ ಭಾಷೆಯಲ್ಲಿ ಒಂದು ಅತ್ಯಪರೂಪದ 'ಅನುಭಾವೀ ಮಹಾಕಾವ್ಯ'ದ ಸ್ಪಂದನದಿಂದಾಗಿ ಕನ್ನಡ ಭಾಷಾ ವಲಯವೂ ಶ್ರೀ ಅರವಿಂದರನ್ನು ಸುಲಭವಾಗಿ ಅರ್ಥೈಸಿಕೊಳ್ಳಲು ಸಹಕಾರಿಯಾಗಿದೆ. ಶ್ರೀಮಾತೆಯವರು "ಇಲ್ಲಿಗೆ" ಆಗಮಿಸಿದ ಶತಮಾನದ ಅವಧಿಯಲ್ಲಿಯೇ ಈ ರೀತಿಯ ಪುರಸ್ಕಾರವೂ ಘೋಷಿತವಾದುದು ಒಂದು ಹೊಸ ಆಯಾಮವನ್ನು "ಶ್ರೀಮಾತಾರವಿಂದ ಸಾಹಿತ್ಯ"ಕ್ಕೆ ತಂದಿದೆ. ಹಳೆಗನ್ನಡದ ಬಿಗಿಬಂಧ, ಆಧುನಿಕ ವಿಜ್ಞಾನ ಮತ್ತು ಆಧ್ಯಾತ್ಮದ ಹಾಸು–ಹೊಕ್ಕುಗಳ ಮೂಲಕ ಸೃಷ್ಟಿಗೊಂಡ ಈ ಕೃತಿ, ಸಂವಹನಕ್ಕೆ ಸೇತುವೆಯಾಗಿದೆ. [ಪಿಪಿಕೆ]

## 24ನೇ ಏಪ್ರಿಲ್ 1951

ಬರಬಹುದಾವೊಂದು ದಿನಂ ನಿಲಬೇಕಾಗಸಹಾಯಕಳಾಗಿಯವಳ,
ಜಗದ ಮೇಣವಳ ಮಿಗೆಯನಿಷ್ಟ–ಭಾವಿಯ ಭಯಾನಕೋಗ್ರ ತೀರದೋಳ್,
ತಾಳ್ದು ಮಾನವನಾಶೆಗಳಮನನ್ಯ ವಿಶುದ್ಧ ಹೃದಯಾಂತರಾಳದೋಳ್
ನೆರೆ ಗೆಲಲ್ಲ ಯಾ ಸೋತು ಪೋಗಲಾ ನಿರಾಶೋನ್ಮತ್ತ ಕೊನೆಯಂಚಿನೊಳ್,
ಏಕಾಕಿಯೇ ತಲುಪಿ ಮೃತ್ಯುವಿನೊಡನೆ  ಮಹಾ ನಾಶದಾ ಕೊನೆಯೆಲ್ಲೆಯಂ.
ತಾಳ್ದು ತನ್ನೇಕೈಕ ಮಹತ್ವಮಮಾ ಅಂತಿಮ ಘೋರ  ದೃಶ್ಯದೋಳ್,
ದಾಟಲೇ ಬೇಕವಳ್, ಭಯಂಕರ ಸೇತುವಂ ರಚಿತ 'ಕಾಲ'–ಪೂರದೋಳ್,
ಮೇಣ್ ಸೇರಬೇಕೊಂದಾ ಜಗ–ಭಾವಿಯ ಶೀರ್ಷ–ಬಿಂದುವಂ ಸಾಹಸದೋಳ್
ವಿಜಿತನಾದಪನೆಲ್ಲಿ ಮಾನವನೆಲ್ಲಮಂ ಯಾ ಕಳಕೊಳ್ದನೆಲ್ಲಮಂ.
ಅಂತಾ ಭಯಾನಕ ಘನ ಘೋರ ಮೌನದೋಳೇಕಾಕಿ ಮೇಣ್ ವಿನಷ್ಟಂ
ಮಿಗೆ ನಿರ್ಣಾಯಕ ಘಟಿಯ ತಾಂ ಸಲೆ ಜಗದದೃಷ್ಟ ವಿಧಿ ಭಾಗ್ಯದೊಳಗಂ,
ಅವಳಾತ್ಮದೊಂದುನ್ನತತಾರೋಹಣದೋಳ್ ಯಾ 'ದೇವ'ನೊ
ಅಗಲಿ ಸುದೂರಕೀ ಜಗದಿಂ ಮಿಗೆ ನೀರವ, ನಿರಾಶದಂಚಿನೋಳ್ ತಾನ್,
ಒಬ್ಬಳೇ ನಿಜಾತ್ಮ ಸಂಗಡಂ ಯಾ ಮೃತ್ಯು ಮೇಣ್ ಭಾವಿಯ ಸಂಗಡಂ
ಇರ್ಪಂತದೊಂದು 'ಕಾಲ'ನ ಮೇಣ್ 'ಕಾಲಾತೀತ'ನ ನಡುವಣ ತಟದೋಳ್
ಕೊನೆಗೊಳ್ಳಲೇಬೇಕಾದಾಗ ಯಾ ಪುನಾರಚಿತಮಾದಾಗ ಜೀವಿ ತಾನ್
ಜಯಿಸಬೇಕೇಕಾಕಿಯವಳ್ ಯಾ ನೆರೆ ಬೀಳಬೇಕೇಕಾಕಿಯವಳ್.
ದೊರಕದವಳ್ಗಾ ಸಮಯದೋಳಲ್ಲಿ ಮಾನವ ಸಹಾಯಮವಾದುಂ,
ನಿಲನ್ ಕವಚಿತ ದೇವನುಂ ಪೊಳೆಯುತಲಿ ತೇಜದಿಂದವಳ ಪಾರ್ಶ್ವದೋಳ್.
ಮೊರೆಯಿಡುವುದುಮಿಲ್ಲ ದಿನಕವಳೇಕಾಕಿಯೆ ರಕ್ಷಿಸಬಲ್ಲಕತದಿಂ.
ವಿಧಿಪ್ರೇಷಿತಮಾಗಿದಕೋಸುಗಮೆ ನೀರವ 'ಶಕ್ತಿ' ಬಂದಿಹುದು ಕೆಳಕೆ;
ಅವಳೋಳ್ ಸಚೇತನ ಸಂಕಲ್ಪಮದು ತಾಳಿಹುದು ಮಾನವಾಕೃತಿಯಂ;
ಅವಳೋರ್ವಳೆ ರಕ್ಷಿಸಬಲ್ಲಳವಳಂ ಮೇಣ್ ಪೊರೆಯಬಲ್ಲಳ್ ಜಗಮುಮಂ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 34/461 – ಶ್ರೀ ಅರವಿಂದರು**

ಅನುವಾದ: ಶ್ರೀ ಮಂದರ್ಕೆ ಮಾಧವ ಪೈ

[ಶ್ರೀ ಅರವಿಂದರ 'ಸಾವಿತ್ರಿ'; ಪರ್ವ 2 'ವಿಧಿ ಗತಿ ಮೇಣ ದುಃಖ ಪ್ರಶ್ನಂ' ಪುಟ 461]

## 24ನೇ ಏಪ್ರಿಲ್ 1952

ವ್ಯಕ್ತಿಸಿತವಳ ಚಂದ್ರಿಕೆ ತಾನ್
ಡನೊಬ್ಬಳ–ಕಾಯಂ ಆನಂದ ಸಿಂಧುವಂ;
ನಿಂತಿಹಳವಳ್ ಜನ್ಮ, ಪರಿಶ್ರಮ ಮೇಣ್ ವಿಧಿಯ ಶಿರೋಪರಿ,
ನಿಜ ಮಂದಗತಿಯಲುರುಳುತಿಹವವಳಿಂಗಿತದೋಳ್ ಕಾಲ–ಚಕ್ರಂಗಳ್;
ಪರಿವರ್ತಿಸಬಲ್ಲುವವಳ ಕರಂಗಳೆ ದಲ್ 'ಕಾಲ'–ಸರ್ಪ ಮೂಲಮಂ.
ಅಡಗಿಸಿಟ್ಟಿಹುದು 'ಅಮಾ–ನಿಶಿ' ತಾನವಳದೆ ರಹಸ್ಯಮಂ;
ರಸಸಿದ್ಧಾಂತಿ ಆತ್ಮದ ಶಕ್ತಿಯಾಗಿಹುದವಳದೆ ತಾನ್;
ಸ್ವರ್ಣ–ಸೇತುವುಮವಳೆ, ಅವಳೆ ಅದ್ಭುತ–ಆದಿ ಅಗ್ನಿಯುಂ.
ಆಗಿಹಳವಳ್ ಸಲೆ 'ಅಜ್ಞೇಯ'ನ ಪ್ರದೀಪ್ತ ಹೃದಯಂ,
ನೀರವತೆಯ ಅಂತಃಶಕ್ತಿಯುಂ 'ದೇವ'ನ ಗಹನಾಳದೋಳ್;
'ಊರ್ಜ್ವಾ'–ಸ್ರೋತಮವಳ್, ಅವಳೆ ಅನಿವಾರ್ಯ 'ಬ್ರಹ್ಮ– ಶಬ್ದಂ',
ಕಠಿಣ ಊರ್ಧ್ವಾರೋಹಣದಲೆಮ್ಮ ಚುಂಬಕ ಶಕ್ತಿಯವಳ್,
ಪ್ರಕಾಶಿಪೆಮ್ಮ ಸೂರ್ಯರುಂ ಪ್ರಚಂಡ 'ಸವಿತಾ' ತಾನವಳ್,
ಅಸಿದ್ಧ 'ಭೂಮಂ'ಗಳಿಂ ನಮಿತಮಾದ 'ಪ್ರಕಾಶ'ಮವಳ್,
ಅಸಂಭವ ಭೂಮಿಕೆಗಳಿಂ ಕಣ್ಸನ್ನೆ ಮಾಳ್ಪ ಹರ್ಷಮವಳ್,
ಅವತರಿಸುವದಿದುವರಮುಚ್ಚ ಲೋಕದೆ 'ಆದಿಶಕ್ತಿ'ಯಿವಳ್.
ಕರೆಯುತಿಹುದವಳನೆ ಸಂಪೂರ್ಣ 'ಪ್ರಕೃತಿ' ಮೂಕ ಮೌನಂ
ಮಾಗಿಸಲವಳ ಚರಣ ಸ್ಪರ್ಶದಿಂದ ನೆರೆ ಪೀಡಕ ಜೀವನ ವ್ರಣಮಂ
ಮೇಣೊಡೆಯಲ್ಲ ಮಸುಕು ಮಾನವಾತ್ಮದಲೊತ್ತಿರ್ದ ಮುದ್ರೆಯಂ
ಬೆಳಸಲವಳಗ್ನಿಯಂ ದ್ರವ್ಯಂಗಳ ನಿಹಿತ ಹೃದಯಂಗಳೋಳ್.
ಆದಪುದೊರ್ದಿನಮಿಲ್ಲೆಲ್ಲಮುಮವಳ ಮಧುರತೆಯ ಧಾಮಂ,

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 34/314** **– ಶ್ರೀ ಅರವಿಂದರು**

ಅನುವಾದ: ಶ್ರೀ ಮಂದರ್ಕೆ ಮಾಧವ ಪೈ

[ಶ್ರೀ ಅರವಿಂದರ 'ಸಾವಿತ್ರಿ'; ಪರ್ವ 3 ಭಗವತೀ ಮಾತೃ ಪರ್ವ ಪುಟ 314]

## "ನಮ್ಮ ಜೀವನವು ಆ ದಿವ್ಯ ಪರಮ ಪಾರಮ್ಯಕ್ಕಾಗಿ ಯಜ್ಞ"
## Our life is a holocaust of the Supreme - Sri Aurabindo, [Savitri Book II Canto I]

ಶ್ರೀ ಅರವಿಂದರ "ಸಾವಿತ್ರಿ" ಮಹಾಕಾವ್ಯದಲ್ಲಿ ಚಿತ್ರಿತಗೊಂಡಿರುವ, ಮಾನವನ ಬದುಕು ಕೇವಲ ತಮದಿಂದ ಬಂದು ತಮದಲ್ಲಿಯೇ ಬದುಕಿ ಮರೆಯಾಗುವ ಜಂಜಡದ ವಿಧಾನವಲ್ಲ; ಅದು ಪೂರ್ಣತ್ವವನ್ನು ಪಡೆಯುವದರ ಸಲುವಾಗಿ, ಅವತರಣಗೊಂಡು, ತಮಸಪ್ತಮದ ಬದುಕಿನಿಂದ ಜ್ಞಾನ ಸಪ್ತಮದ ಮೂಲಕ ಪರಿಪೂರ್ಣತೆಯನ್ನು ಪಡೆಯುವ ಸಲುವಾಗಿ ವಿಕಸನಗೊಳ್ಳುತ್ತಿರುವ ವಿಧಾನವಾಗಿದೆ. ಪರಿಶುಭ್ರ ಬೆಳಕಿಗೆ ಆಯಾಮವಿರುವದಿಲ್ಲ; ಆದರೆ ಆಯಾಮದ ಹಂತವಿಲ್ಲದೇ ಪರಿಪೂರ್ಣತೆ ಸಾಧ್ಯವಿಲ್ಲ. ಹೀಗಾಗಿ, ಆಯಾಮವನ್ನು ಪಡೆದುಕೊಳ್ಳುವದರ ಸಲುವಾಗಿ ಈ ಪರಮ ಪಾರಮ್ಯವು ಸೂಕ್ಷ್ಮ ರೂಪದಲ್ಲಿ – ಅಂಶಾತ್ಮಕವಾಗಿ – ಮಾನವನ ದೇಹದಲ್ಲಿ ಅವತರಿಸುತ್ತದೆ.

ಇದು ಹೃದಯದಲ್ಲಿ, ಆತ್ಮಜ್ಯೋತಿಯಾಗಿ ಸೂಕ್ಷ್ಮಾತಿಸೂಕ್ಷ್ಮ ರೂಪದಲ್ಲಿರುವ ಈ ಬ್ರಹ್ಮಚೈತನ್ಯವು (ಋತವು) ತನ್ನದೇ ಮೂಲವನ್ನು ಮತ್ತೆ ಪಡೆಯುವ ಸಲುವಾಗಿ ಸದಾ ತುಡಿಯುತ್ತಿರುತ್ತದೆ. ಆದರೆ ಭೂ–ಬದುಕ ಕವಚದೊಳಗೆ ಸಿಲುಕಿದ ಈ ಸೂಕ್ಷ್ಮಾಂಶವು ತನ್ನ ಮೂಲನೆಲೆಯನ್ನು ಮರೆತು, ಲೌಕಿಕ ಆಕರ್ಷಣೆಗೆ ಸಿಲುಕಿ ಸದಾ ವಿಭ್ರಮೆಯಲ್ಲಿಯೇ ಇರುತ್ತದೆ. ಹಗಲು–ರಾತ್ರಿಗಳ, ಬೆಳಕು–ಕತ್ತಲೆಯ ವಿನ್ಯಾಸದ ಹಿಂದಿರುವ ವಿಕಸನದ ಅಲೆಯ ಚಲನೆಯನ್ನು ಅರಿಯದೇ, ಜಂಜಡದ ಸ್ಥಿತಿಯಲ್ಲಿ ತೇಲುತ್ತಿರುತ್ತದೆ.

ಈ ಸ್ಥಿತಿಯಿಂದ ಮಾನವನ ಆತ್ಮವನ್ನು ಮತ್ತೆ ನಿಗದಿತವಾಗಿರುವ ಶಾಶ್ವತದ ಸತ್ಯದ ನೆಲೆಗೆ ತೆಗೆದುಕೊಂಡು ಹೋಗುವ ಹೊಣೆಗಾರಿಕೆಯೂ ಸಹಿತ ಈ "ಪರಮ ಪಾರಮ್ಯ"ದ್ದೇ ಆಗಿರುತ್ತದೆ. ಈ ಭೂ–ಬದುಕಿನ ಸ್ಥಿತಿಯಲ್ಲಿ ರೂಪುಗೊಳ್ಳುವ ಆಯಾಮಗಳು, ಸೂಕ್ಷ್ಮ ರೂಪದ ಆತ್ಮಜ್ಯೋತಿಯ ಜೊತೆಗೆ ಮೂಲದಲ್ಲಿ ಸಂಲಗ್ನಗೊಳ್ಳುವ ಮೂಲಕ ಪರಿಪೂರ್ಣತೆಯನ್ನು ಪಡೆಯಲು ಸಹಕರಿಸುತ್ತವೆ. ಇದು ವಿಶ್ವ ನಿಯಮ. ಆದರೆ ಮಾವನ ಕುಲವು ಈ ಕ್ರಿಯೆಯ ಹಂತದ ವಿವರಗಳನ್ನರಿಯದೇ, "Holocaust" ಹೋಲೋಕಾಸ್ಟ್ ಎನ್ನುವದನ್ನು ಪ್ರಳಯ–ಲಯ– ವೈಪರೀತ್ಯ ಎನ್ನುವ ರೀತಿಯಲ್ಲಿ ಪರಿಗಣಿಸಿ, ಮತ್ತೂ ಮತ್ತೂ ಗೊಂದಲದಲ್ಲಿಯೇ ಬದುಕು ಮುಂದುವರೆಸುತ್ತದೆ. ಹೋಮವಾಗಲಿ, ಯಾಗವಾಗಲಿ

ಅಥವಾ ಯಜ್ಞವಾಗಲಿ, ಇವೆಲ್ಲ ಮಾನವನ ಬಯಕೆಗಳ ಈಡೇರಿಕೆಯ ಸಲುವಾಗಿ, ದೈವೀ ಶಕ್ತಿಗಳಿಗೆ ಅರ್ಪಿಸುವ ವಿಧಿ–ವಿಧಾನಗಳಂತೆ ರೂಪಿತಗೊಂಡ ಘಟನೆಗಳಾಗಿವೆ. ಒಂದು ವೇಳೆ ಈ ರೀತಿಯ ಘಟನೆಗಳು ಭೂ–ಬದುಕಿಗೇ ಅಂಟಿಕೊಂಡಿರುವ ಸಲುವಾಗಿಯೇ ನಡೆಸಲ್ಪಡುತ್ತಿದ್ದಲ್ಲಿ, ಅದು ಪರಿಪೂರ್ಣತೆಯ ಹಂತದೆಡೆಯ ಪಯಣವನ್ನು ಖಂಡಿತವಾಗಿಯೂ ವಿಚಲನೆಗೊಳಿಸುತ್ತದೆ. ಅದಕ್ಕಿಂತ ಹೆಚ್ಚಾಗಿ ಸದಾ ಸುಖದ ಆನಂದದ ಬದುಕು ನಮಗಿರಲಿ ಎಂದು ಬೇಡಿಕೆ ಇಟ್ಟು, ಅದರ ಪೂರೈಕೆಗಾಗಿ ಕೊಡು–ಕೊಳ್ಳುವ ವ್ಯವಹಾರಾತ್ಮಕವಾದ ರೀತಿಯಲ್ಲಿ ಇರುತ್ತದೆ. ಹೀಗಾಗಿ ಇಂಗ್ಲೀಷಿನ ಈ ಹೋಲೋಕಾಸ್ಟ್ ಎನ್ನುವದು ಬಲಿ–ಪ್ರಳಯ ಎನ್ನುವ ವಿಘಟನಾತ್ಮಕ ಧೋರಣೆಯಲ್ಲಿಯೇ, ವಿಘಾತಕಾರೀ ಅಂಶಗಳಲ್ಲಿಯೇ ಪ್ರತಿಪಾದಿಸಿಕೊಂಡು ಬರಲಾಗಿತ್ತು.

ಆದರೆ ಯಜ್ಞವು ಇದಕ್ಕೆ ಸಂಪೂರ್ಣ ವಿಭಿನ್ನ ನೆಲೆಯಲ್ಲಿಯೇ ಇರುತ್ತದೆ. ಯಜ್ಞವು ನೈಸರ್ಗಿಕ ವಿಕಸನಕ್ಕೆ ಬ್ರಹ್ಮಾಂಡವು ಸ್ವಯಂ ನಿರೂಪಿಸಿಕೊಂಡಿರುವ ನಿಯತಿಯಾಗಿದೆ. ನಿರಾಕಾರವಾಗಿರುವ ಅನಂತವು ಅವಕಾಶದಲ್ಲಿ ಆಕಾರಗೊಂಡು ಅವಕಾಶದಲ್ಲಿಯೇ ಪ್ರಕಟಗೊಳ್ಳುವ ಪ್ರಕ್ರಿಯೆಯಾಗಿ ಯಜ್ಞವು ರೂಪುಗೊಳ್ಳುತ್ತದೆ. ಇದು ವಿಕಸನದ ಅಲೆ; ಬ್ರಹ್ಮ–ಬ್ರಹ್ಮಾಂಡದ ರಚನೆಗಾಗಿ ಆಗಮಿಸಲಿರುವ ಕಿರಣ; ಇದೇ ಋತವೂ ಹೌದು. ಖೇಖ ಮಧ್ಯದಲ್ಲಿ (ಕಾಸ್ಮೋಕಾಸ್ಮಿಕ ಝೆನಿಥ್) ಇರುವ ಆ ಊರ್ಧ್ವಾತಿಊರ್ಧ್ವ ನೆಲೆಯಲ್ಲಿ ಇದ್ದ ಋತವು, ಅನಂತವಾಗಿ ನಿರಾಕಾರವಾಗಿ ಇರಲು ಬಯಸದೇ, ತನ್ನನ್ನು ತಾನು ಆಯಾಮಗಳಲ್ಲಿ ಕಂಡುಕೊಳ್ಳಲು ಬಯಸುತ್ತದೆ. ಅದಕ್ಕಾಗಿ ರೂಪಾಂತರಗೊಳ್ಳುವದು ನಿಸರ್ಗ ಸಹಜ ಕ್ರಿಯೆಯಾಗುತ್ತದೆ. ಈ ರೂಪಾಂತರದ ಅನುಭವಕ್ಕಾಗಿ, ರೂಪಾಂತರವನ್ನು ಹೊಂದಲು ಅನುಕೂಲವಿರುವ ಭೂ–ಬದುಕಿನ ಸ್ತರಕ್ಕೆ ಅವತರಣಗೊಂಡು ಬರುತ್ತದೆ. ಆಗ, ಅವಕಾಶದ ಸುರಕ್ಷಾವಲಯವಿರುವ ಈ ಭೂ–ಬದುಕಿನ ವಲಯಕ್ಕೆ ಸೂಕ್ಷ್ಮಾತಿಸೂಕ್ಷ್ಮ ಅಣುವಿನಾಕಾರದಲ್ಲಿ, ಪ್ರವೇಶ ಮಾಡುತ್ತದೆ. ಅದಕ್ಕಾಗಿ ಬ್ರಹ್ಮಾಂಡವನ್ನೆಲ್ಲ ಅರಸಿಕೊಂಡು, ಸುರಕ್ಷಾವಲಯವನ್ನು ಅರಸಿಕೊಂಡು ಬರುವ ಈ ಪ್ರಕ್ರಿಯೆಯು ಯಜ್ಞವಾಗಿರುತ್ತದೆ. ಹೀಗಾಗಿ ವಿಶ್ವ ನಿಯಮವನ್ನು ಭೂ–ಬದುಕಿನಲ್ಲಿ ಕಾಣುವ ಪ್ರಕ್ರಿಯೆಯು ಯಜ್ಞವಾಗಿದೆ. ಇಂತಹ ಯಜ್ಞದ ಮೂಲಕವೇ ನಿರಾಕಾರವಾಗಿರುವ ಆತ್ಮವು ಮಾನವ ದೇಹದಲ್ಲಿ ಹೃದಯ–ಜ್ಯೋತಿಯಾಗಿ ಸಾಕಾರಗೊಳ್ಳುತ್ತದೆ.

ಆದರೆ ಸುರಕ್ಷಾವಲಯ(ಗೋಲ್ಡೀ ಝೋನ್)ವನ್ನು ಪ್ರವೇಶಿಸುವಾಗ, ಸಹಜವಾಗಿಯೇ ನಿಸರ್ಗದ ನಿಯಮದಂತೆ ವಿಚಲನೆ ಹೊಂದುತ್ತದೆ. ಹೀಗಾಗಿ ಒಮ್ಮೆ ಈ ಭೂ–ಬದುಕಿನ ಗುರುತ್ವಕ್ಕೆ ಸಿಲುಕಿದ "ಆತ್ಮ" ಮತ್ತೆ ತನ್ನ ಮೂಲ ನೆಲೆಗೆ ಹೋಗುವದು ಸುಲಭ ಸಾಧ್ಯವಲ್ಲ. ಅದರಲ್ಲೂ ವಿಭ್ರಮಕಾರೀ ಆಕರ್ಷಣೆಯ ಗುರುತ್ವವಂತೂ ಮೇಲೇರದಂತೆ–ವಿಕಸನಗೊಳ್ಳದಂತೆ ಅಡೆ–ತಡೆ ಒಡ್ಡುತ್ತಲೇ ಇರುತ್ತದೆ. ನಶ್ವರದ ಬದುಕಿನ ಸೀಮಿತ ವಲಯದಲ್ಲಿಯೇ ಕಾಲ್ಪನಿಕ ಸುಖದ ಪರಿಕಲ್ಪನೆಯಲ್ಲಿ ಸಂತೃಪ್ತಿಯನ್ನು ಕಂಡಂತೆ (ಸಂ)ಭ್ರಮಿಸುತ್ತದೆ.

ಇಂತಹ ವಿಸಂಗತೆಯನ್ನು ಯಜ್ಞ ಮಾತ್ರ ಯಶಸ್ವಿಯಾಗಿ ತಡೆಯಬಲ್ಲದು. ಏಕೆಂದರೆ ಯಜ್ಞವು ವಿಶ್ವ ರಚನೆಯ ಕ್ರಮವಾಗಿದೆ. ಇದು ಬ್ರಹ್ಮಾಂಡದ ಸೂತ್ರವೂ ಹೌದು. ಪರಿಪೂರ್ಣತೆಯ ಪಥದ ಆದಿಯಿಂದ ಹಿಡಿದು ಅಂತ್ಯದವರೆಗೂ ಸದಾಕಾಲವೂ ನಡೆಯುತ್ತಲೇ ಇರುವ ಕ್ರಿಯೆಯಾಗಿದೆ. ಮಾನವ ಪ್ರಜ್ಞೆಗೆ ವಿಶ್ವ ರಹಸ್ಯವನ್ನು ಅರಸುವ ಪಥವನ್ನು ತೋರಿಸಿ, ಅಲ್ಲಿ ಪಯಣಿಸಲಿರುವವರಿಗೆ ಮಾರ್ಗದರ್ಶನ ಮಾಡುವ ಕ್ರಿಯೆಯೇ ಯಜ್ಞವಾಗಿದೆ.

ವಾಸ್ತವದ ವಿರೋಧಾಭಾಸವೆಂದರೆ, ಆ ತೆರನಾಗಿ ಇದ್ದ ವೇದದ ಅರ್ಥವನ್ನು ಹ್ರಸ್ವಗೊಳಿಸಿ, ಹೋಮವನ್ನಾಗಿಸಿಯೋ ಅಥವಾ ಯಾಗವನ್ನಾಗಿಸಿಯೋ ಪರಿವರ್ತಿಸಲಾಯಿತು. ಲೌಕಿಕ ಬಯಕೆಗಳು ಈಡೇರಬೇಕೆಂದರೆ ಇವುಗಳನ್ನು ಮಾಡಲೇಬೇಕು ಎಂದು ವಿಚಲನೆಗೊಳಿಸಲ್ಪಟ್ಟ ಸಂಗತಿಗಳನ್ನೇ ವ್ಯವಸ್ಥಿತವಾಗಿ ಪ್ರಚುರಪಡಿಸಲಾಯಿತು. ಯಜ್ಞದ ಮೂಲ ಉದ್ದೇಶವಾದ ಪೂರ್ಣದಿಂದ ಬಂದು ಪೂರ್ಣತ್ವ ಪರಿಪಕ್ವ ಪರಿಪೂರ್ಣತೆಯತ್ತ ಸಾಗಬೇಕಾಗಿದ್ದ ಉದಾತ್ತ ಪಥವನ್ನು ವಿಚಲನೆಗೊಳಿಸಲಾಯಿತು. ಹೀಗಾಗಿ ಹೋಲೋಕಾಸ್ಟ ಎನ್ನುವದು ನಿಷೇಧಾತ್ಮಕ ರೂಪದಲ್ಲಿಯೇ ಸಂಗತವಾಗತೊಡಗಿತು.

ಇದನ್ನು ಸೂಕ್ತಗೊಳಿಸಿದ ಕೃತಿ "ಸಾವಿತ್ರಿ".

ಸಮಾಜ ಮತ್ತು ಸಾಮಾಜಿಕ ಮೌಲ್ಯಗಳು ಮತ್ತು ಸಾಂಸ್ಕೃತಿಕ ಬದುಕು ಹಾಗೂ ಸಾಮರಸ್ಯಗಳು ಆಯಾ ಪರಿಸರದ ಭಾಷಾ ವ್ಯವಸ್ಥೆಯಲ್ಲಿಯೇ ರೂಪುಗೊಳ್ಳುತ್ತ ಪರಿಷ್ಕೃತವಾಗುತ್ತಿರುತ್ತದೆ. ಒಂದು ವೇಳೆ ಇಲ್ಲಿ ನಿರ್ಮಿತಿಗೊಳ್ಳುವ ಭಾಷಾ ವ್ಯವಸ್ಥೆಯಲ್ಲಿ ಸಾಮಾಜಿಕ ಬದುಕಿನ ತುರ್ತುಗಳೇ ಪ್ರಧಾನವಾಗಿ, ತಾತ್ಕಾಲಿಕ ಶಮನಗಳೇ ಅಂತಿಮ ಗುರಿಯಾಗಿ, ಅದೇ ತೆರನಾಗಿ ರೂಪಿತಗೊಂಡ

ಅರ್ಥವೇ ಪ್ರಧಾನವಾಗಿ ಬಿಡುತ್ತದೆ. ಹೀಗಾಗಿ ಈ ರೀತಿ ವಿಚಲನಗೊಂಡ ಶಬ್ದಗಳನ್ನೇ ಆಧಾರವನ್ನಾಗಿಸಿ ಪೀಳಿಗೆಗೆ ಮಾರ್ಗದರ್ಶನವೂ ನಡೆಯುತ್ತದೆ. ಇಂದು ಇಂಗ್ಲೀಷಿನ ಮೂಲಕ ಸಂಸ್ಕೃತವನ್ನು ಕಲಿಯುತ್ತಿರುವ ಸಂದರ್ಭದಲ್ಲಂತೂ ಇಂತಹ ಅಸಂಗತಗಳ ಸರಣಿಯೇ ಇದೆ. ಭಾರತೀಯ ಸಾಂಸ್ಕೃತಿಕ ಮತ್ತು ಜೀವನ ವಿಧಾನದ ಹಿನ್ನೆಲೆಯಲ್ಲಿ ಹೋಲೋಕಾಸ್ಟ ಎನ್ನುವದನ್ನು ಯಜ್ಞ ಎಂದು ಅರ್ಥೈಸಿಕೊಂಡಲ್ಲಿ ಹೊಸದೊಂದು ಹೊಳಹು ಕಾಣುತ್ತದೆ.

## ಹೃದಯ ಸ್ಪಂದನದ ಮೂಲ – ಸೂಕ್ಷ್ಮಾಂಡ ಸೃಷ್ಟಿಲೀಲ

ಮಾನವನ ದೇಹದಲ್ಲಿ ಪ್ರಪ್ರಥಮವಾಗಿ ರೂಪಣೆಗೊಳ್ಳುವ ಅಂಗವೆಂದರೆ ಹೃದಯ. ಇದು ಸಸ್ತನಿಗಳ ದೇಹದ ವಿಕಸನಕ್ಕೆ ನಾಂದಿ ಹಾಡುತ್ತದೆ. ಹೀಗಾಗಿ ಇದರ ಪ್ರಪ್ರಥಮ ಮಿಡಿತವೇ ದೇಹ ರಚನೆಯ ಮೂಲ ಕ್ರಿಯೆಯಾಗಿದೆ. ಹೃದಯದ ಮೂಲಕವೇ ರಕ್ತ ಪೂರಣೆಯಾಗುತ್ತಿರುವ ವಿಷಯ ಇಂದು ಎಲ್ಲರಿಗೂ ತಿಳಿದ ಸಂಗತಿ. ಆದರೆ ಇದೇ ಹೃದಯವನ್ನು "ಭಾವನೆಗಳ ತೊಟ್ಟಿಲು" ಎಂದು ಪರಾ–ಭೌತಿಕ (ಆಧ್ಯಾತ್ಮ) ಶಾಸ್ತ್ರವು ಊಹಿಸುತ್ತದೆ. ಮತ್ತೊಂದು ಸೋಜಿಗದ ಸಂಗತಿ ಎಂದರೆ, ಹೃದಯದ 2/3 ಭಾಗವು ಈಗಲೂ ರಕ್ತ ಪೂರಣೆಯ ಕ್ರಿಯೆಯಲ್ಲಿ ಭಾಗವಹಿಸುತ್ತಿಲ್ಲ. ಇದೇಕೆ ಹೀಗೆ ಎನ್ನುವದೂ ಇನ್ನೂ ಸಂಶೋಧನೆಯನ್ನು ಬಯಸುತ್ತಿದೆ. ಆದರೆ ಈ 2/3 ಭಾಗವು ತನ್ನಲ್ಲಿಗೆ ಬಂದ ರಕ್ತಕ್ಕೆ ಅವಶ್ಯವಿದ್ದ ಶಾಖವನ್ನು ಕೊಟ್ಟು, ರಕ್ತವನ್ನು ಪರಿಶುದ್ಧಗೊಳಿಸಿ ಮುಂದಕ್ಕೆ ಕಳಿಸುತ್ತದೆ. ಈ ಹೃದ್ಗುಹೆಯಲ್ಲಿ ಉತ್ಪನ್ನವಾಗುವ ಉಷ್ಣವು (ಅಗ್ನಿ) ಇಂತಹ ಪರಿಷ್ಕರಣಕ್ಕೆ ಸಹಕರಿಸುತ್ತದೆ. ಅಂದರೆ ಇದೇ ಸಂರಚನೆಯನ್ನು ನಾವು ವಿಶ್ವ ರಚನೆಯ ಪ್ರಕ್ರಿಯೆಗೆ ಹೋಲಿಸಿದಲ್ಲಿ – ಅದೂ ಲಭ್ಯವಿರುವ ದತ್ತಾಂಶಗಳ ಹಿನ್ನೆಲೆಯಲ್ಲಿ – ಈ ದೇಹವೇ ಒಂದು ವಿಶ್ವವಾಗಿ, ಅಲ್ಲಿ ಹೃದಯವೇ ನಾಭಿ ಕೇಂದ್ರವಾಗಿ, ಶಕ್ತಿ–ಬಲ–ಬೆಳಕನ್ನು ಕೊಡುತ್ತಿರುವ ಸೂರ್ಯನಂತೆಯೇ ಕಾರ್ಯ ನಿರ್ವಹಿಸುತ್ತಿದೆ.

ಹೃದಯ ಮಿಡಿತದ ಮೂಲ;

ವೈದ್ಯಕೀಯ ಶಾಸ್ತ್ರದಲ್ಲಿ ಮಾನವನ ದೇಹವನ್ನು ಒಂದು ಸುಸಜ್ಜಿತ ಯಂತ್ರವೆಂದೇ ಪರಿಗಣಿಸಿ ಅಭ್ಯಸಿಸಲಾಗುತ್ತಿದೆ. ಸಧ್ಯ ಸಾಧ್ಯವಾಗುತ್ತಿರುವ ಎಲ್ಲ

ಸಾಧನೆಗಳ ಮತ್ತು ಚಟುವಟಿಕೆಗಳಿಗಿಂತ ಇನ್ನೂ ಇನ್ನೂ ಅಪಾರ ಸಾಧ್ಯತೆಗಳನ್ನು ನಡೆಸಲು ಶಕ್ಯವಿರುವ ಅಪರೂಪದ ಯಂತ್ರದಂತೆಯೇ (ರೋಬೋಟ್) ಈ ದೇಹವನ್ನು ಗುರುತಿಸಲಾಗುತ್ತಿದೆ. ಭೂಮಿಯ ಮೇಲಿನ ಯಾವುದೇ ಯಂತ್ರವೂ ಕಾರ್ಯ ನಿರ್ವಹಿಸುತ್ತಿರುವಾಗ ಅದು ಭೂಮಿಯ ಗುರುತ್ವಾಕರ್ಷಣೆಯ ನಿಯಮದಂತೆಯೇ – ನ್ಯೂಟನ್ನನ ನಿಯಮದಂತೆಯೇ – ಕಾರ್ಯ ನಿರ್ವಹಿಸುತ್ತದೆ. ಕ್ರಿಯೆಗೆ ತಕ್ಕ ಪ್ರತಿಕ್ರಿಯಯೇ ಈ ನಿಯಮವಾಗಿದೆ. ಇದನ್ನೇ ಮತ್ತೊಂದು ರೂಪದಲ್ಲಿ ಹೇಳುವದಾದಲ್ಲಿ, ಬಾಹ್ಯದ ಶಕ್ತಿಗಳ ಮೂಲಕ ಉದ್ದೀಪನೆಗೊಳಿಸಿ ನಿರ್ಮಿಸಲ್ಪಟ್ಟ ಯಂತ್ರವೊಂದು ಯಾವುದೇ ಕಾರ್ಯವನ್ನೂ ನಿರ್ವಹಿಸಬಲ್ಲುದು. ಹೀಗಾಗಿ, ಇಲ್ಲಿ ದತ್ತಗೊಳಿಸಿರುವ ಬಾಹ್ಯಶಕ್ತಿ/ಬಲ ಮತ್ತು ಸಹಕಾರದೊಡನೆ ಆ ಯಂತ್ರದಿಂದ ನಿಗದಿಗೊಳಿಸಲ್ಪಟ್ಟ ಫಲಿತಾಂಶವನ್ನು – ಕ್ರಿಯೆಯನ್ನು ಪಡೆಯಬಹುದಾಗಿದೆ.

ಇದಕ್ಕೆ ವಿಪರ್ಯಯವಾಗಿ, ಬಾಹ್ಯ ಶಕ್ತಿಗಳ ಯಾವುದೆ ಉದ್ದೀಪನೆ ಇಲ್ಲದೇ, ನಿಸರ್ಗ ಸಹಜವಾಗಿ (stimulous de novo) ಈ ಜೈವಿಕ ಯಂತ್ರವಾಗಿರುವ ದೇಹವು ಕಾರ್ಯ ನಿರ್ವಹಿಸುತ್ತದೆ. ಹೀಗಾಗಿ ಭೂಮಿಯ ಮೇಲಿರುವ – ಅದರಲ್ಲೂ ಪ್ರಾಣಿ ಪ್ರಪಂಚದ ಸದಸ್ಯರೆಲ್ಲರೂ – ಎಲ್ಲರೂ ನಿಸರ್ಗ ಸಹಜವಾದ ಚಟುವಟಿಕೆಗಳಲ್ಲಿ ತೊಡಗಿಕೊಂಡಿದ್ದಾರೆ. ಇದಕ್ಕೆ ದೊರೆಯುವ ಮೂಲ ಶಕ್ತಿಯು ಹೃದಯದ ಮಿಡಿತದ ಮೂಲಕವೇ ದೊರೆಯುತ್ತಿದೆ. ಈ ಹೃದಯದ ಮಿಡಿತವು ದೇಹದಲ್ಲಿಯೇ ಅಂತರ್ಗತವಾಗಿದ್ದರೂ ಸಹಿತ, ನೈಸರ್ಗಿಕವಾಗಿ ತಂತಾನೆ ಪ್ರಾರಂಭಗೊಂಡಿರುತ್ತದೆ.

ಆಶ್ಚರ್ಯದ ಮಾತೆಂದರೆ ಸಸ್ತನಿಗಳಲ್ಲಿ, ಪ್ರಪ್ರಥಮವಾಗಿ ಜೈವಿಕ ಕ್ರಿಯೆ ಪ್ರಾರಂಭವದೇ ಈ ಹೃದಯದ ಮಿಡಿತವು ಉದಿಸುವದರ ಮೂಲಕ. ಇದು ವಿಶ್ವ ಸತ್ಯ. ಹೃದಯದಲ್ಲಿನ ಕೋಶಗಳ (ಪೇಸ್–ಮೇಕರ್ ಸೆಲ್ಸ) ಮೂಲಕವೇ ಈ ಕ್ರಿಯೆ ಪ್ರಾರಂಭಗೊಂಡಿರುತ್ತದೆ. ಇದು ಪುರುಷನ ವೀರ್ಯಾಣು ಮತ್ತು ಸ್ತ್ರೀಯ ಡಿಂಬಾಣುಗಳು ನಿಷೇಚನೆಗೊಂಡ ಇಪ್ಪತ್ನಾಲ್ಕು ತಾಸಿನಲ್ಲಿಯೇ ಈ ಹೃದಯದ ಸಂರಚನೆಗೆ ಅತ್ಯಾವಶ್ಯವಿರುವ ಅಂಶಗಳು ನಿರ್ಮಿತಿಗೊಂಡು, ಮಿಡಿತವನ್ನು ಪ್ರಾರಂಭಿಸುತ್ತವೆ. ಇದು ಅತ್ಯಂತ ಕ್ಷೀಣ ಧ್ವನಿಯಲ್ಲಿ ಇದ್ದರೂ, ಇಂದು ಮಾನವನು ಸಂಶೋಧಿಸಿದ ಯಂತ್ರಗಳ ಸಹಾಯದಿಂದ ಆ ಮಿಡಿತವ

ಧ್ವನಿಯನ್ನು ಆಲಿಸಬಹುದಾಗಿದೆ. ಹೀಗಾಗಿ ಮಾನವನಲ್ಲಿ (ಸಸ್ತನಿಗಳಲ್ಲಿ) ನಿಷೇಚನೆಗೊಂಡ ಯುಗ್ಮಕದಲ್ಲಿ ಮಿಡಿತಕ್ಕೆ ಪ್ರಪ್ರಥಮ ಮುಹೂರ್ತ ನಿಗದಿಯಾಗಿರುತ್ತದೆ. ಇದನ್ನೇ ಶ್ರೀ ಅರವಿಂದರು ತಮ್ಮ ಸಾವಿತ್ರಿಯಲ್ಲಿ ವಿವರವಾಗಿ ಚಿತ್ರಿಸಿದ್ದಾರೆ. ಶ್ರೀ ಮಂದರ್ಕೆ ಮಾಧವ ಪೈ ಅವರ ಅನುವಾದವು ಸಹಿತ ಅದನ್ನು ಸಮರ್ಥವಾಗಿಯೇ ಕನ್ನಡಕ್ಕೆ ಅನುಸ್ಪಂದಿಸಿದೆ (ಅತಿದೂರಮಪರಿಚಿತಮುಮಾಗಿರ್ದ ಗುಪ್ತ–ಅಪೂರ್ವ ವಸ್ತಗಳುಮುಂ/ಆಗಿರ್ದುವಾತ್ಮದ ಸ್ಪರ್ಶ – ಬೋಧದಲಿ ಹೃದಯ ಸಂಪರ್ಕ ನಿಕಟಂ,

[ಸಾವಿತ್ರಿ; ಪರ್ವ 2 ಪುಟ 96]

---

**ಆಧಾರ:**

1) Talbort SL.Biology's shameful Refusla to Disown the Machine-Organism

2) Dr.Sandeep Shukla AIIMs NewDelhi [Science and Scientist-2017 magazine]Page 122.

## 24ನೇ ಏಪ್ರಿಲ್ 1956

– ಅನುವಾದ: ಪ್ರೊ. ವೀರಭದ್ರಪ್ಪ ಕೆ.

ಸುಪ್ರಮಾನಸ ಭೂಮಿಯ ಮೇಲೆ ಪ್ರಕಟವಾಗುವುದು ಬರಿ ಭರವಸೆಯಾಗಿ ಉಳಿದಿಲ್ಲ. ಅದೊಂದು ಜೀವಂತ ವಾಸ್ತವ. ಒಂದು ಪರಮ ಸತ್ಯ. ಅದು ಇಲ್ಲಿ ಕೆಲಸ ಮಾಡುತ್ತಿದೆ, ಇಂಥಾ ಒಂದು ದಿನ ಬರುತ್ತೆ, ಆಗ ಅತ್ಯಂತ ಕುರುಡನಾದವನು, ಏನೂ ಪ್ರಜ್ಞೆ ಇಲ್ಲದವನು, ಏನನ್ನೂ ಬಯಸದೆ ಇರುವವನು ಕೂಡ ಅದನ್ನು ಗುರುತಿಸಿ, ಒಪ್ಪಿಕೊಳ್ಳುತ್ತಾನೆ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 15/96**

## 24ನೇ ಏಪ್ರಿಲ್ 1957

ಶಾಶ್ವತದಲ್ಲಿ ಪರಿವರ್ತನೆಯಾಗುವಲ್ಲಿ, ಅವತಾರವೊಂದು ಬರಿ ಘೋಷಕ, ಹೆಚ್ಚಾದ ಪರಿಪೂರ್ಣ ಸಾಕ್ಷಾತ್ಕರಿಸಿಕೊಳ್ಳುವಲ್ಲಿರುವ ತಾಣದಲ್ಲೆಲ್ಲವೂ ಮುಂಚೂಣಿಯಲ್ಲಿರುವವನು.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 13/22**

## 24ನೇ ಏಪ್ರಿಲ್ 1958

ಮಾನವರನ್ನು ಮುಕ್ತ ಮಾಡುವಲ್ಲಿ ದೈವೀ ಕೃಪೆಯು ಭೂಮಿಯ ಮೇಲೆ ಕಾರ್ಯ ನಿರ್ವಹಿಸುತ್ತಿರುವಾಗ, ಎರಡು ಪೂರಕ ಅಂಶಗಳನ್ನು ಹೊಂದಿರುತ್ತದೆ. ಇವೆರಡು ಅಂಶಗಳು ಅವಶ್ಯ, ಆದರೆ ಸಮತ್ವವಾಗಿ ಮೆಚ್ಚಲ್ಪಡುವುದಿಲ್ಲ. ಸಾರ್ವಭೌಮವಾಗಿ ಅವಿಕಾರಿಯಾಗಿಸಿ ಶಾಂತಗೊಳಿಸುವ ಜೊತೆಗೆ ತಳಮಳದಿಂದ ಹಾಗೂ ಉದ್ವೇಗದಿಂದ ಮತ್ತು ಪರಿಶ್ರಮದಿಂದ ಮುಕ್ತವಾಗಿಸುತ್ತದೆ. ಕ್ರಿಯಾಶೀಲವಾದ ಸರ್ವಶಕ್ತವಾದ ಪ್ರಗತಿಯು ಸಂಕೋಲೆಯಿಂದ, ಬಂಧನದಿಂದ ಮತ್ತು ಜಡತ್ವದಿಂದ ಮುಕ್ತವಾಗಿರುವಂತೆ ಮಾಡುತ್ತದೆ. ಶಾಂತಿಯು ವಿಶ್ವಾತ್ಮಕವಾಗಿ ಮೆಚ್ಚುಗೆಗೆ ಪಾತ್ರವಾಗಿದೆ ಮತ್ತು ದೈವಯೆಂದೇ ಗುರುತಿಸಲ್ಪಟ್ಟಿದೆ ಆದರೆ ಪ್ರಗತಿ ಮಾತ್ರ ಯಾರ ಅಭೀಪ್ಸೆ ತೀವ್ರವಾಗಿದೆಯೋ ಮತ್ತು ಧೈರ್ಯದಿಂದ ಕೂಡಿದೆಯೋ ಅಂತಹವರಿಂದ ಸ್ವಾಗತಿಸಲ್ಪಡುವುದು.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 15/185**

## 24ನೇ ಏಪ್ರಿಲ್ 1959

ದೈವೀ ಪರಿಪೂರ್ಣತೆಯು ಯಾವಾಗಲೂ ನಮ್ಮನ್ನು ಮೀರಿ ಮೇಲೆ (ಊರ್ಧ್ವದಲ್ಲಿಯೇ) ಇದೆ; ಆದರೆ ಮನುಷ್ಯ ದೈವೀ ಪ್ರಜ್ಞೆಯನ್ನು ಹೊಂದುವದು ಮತ್ತು ಅದರಂತೆ ನಡೆಯುವುದು ಅದನ್ನು ಅಂತರಂಗವಾಗಿ ಮತ್ತು ಬಹಿರಂಗವಾಗಿ ದೈವೀ ಜೀವನವನ್ನು ಜೀವಿಸುವುದು ಆಧ್ಯಾತ್ಮಿಕತೆಯ ಅರ್ಥವಾಗಿದೆ; ಇದಕ್ಕಿಂತ ಕಡಿಮೆ ಅರ್ಥವನ್ನು ಕೊಡುವ ಶಬ್ದಗಳು ಅಸಮರ್ಪಕ ತಡವರಿಕೆಗಳು ಅಥವಾ ವೇಷದಾರಿಕೆಗಳಾಗಿವೆ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 25/262–63**

## 24ನೇ ಏಪ್ರಿಲ್ 1960

ನಿರಾಕಾರ ಮತ್ತು ಆಕಾರ ಅವಳಲ್ಲಿ ಒಂದುಗೂಡಿದವು, ಅವಳ ಒಂದು ನೋಟ ಆಗಾಧತೆಯನ್ನು ಮೀರಿತ್ತು, ಅವಳ ಮುಖ ಅನಂತತೆಯ ಸಮಗ್ರತೆಯನ್ನು ಪ್ರಕಟಿಸಿದೆ, ಅವರ್ಣನೀಯ ಅವತರಣಿಕೆ ಅವಳ ಬೆರಳಲ್ಲಿದೆ, ಅಂಥ ಜಗತ್ತಿನ ಶಕ್ತಿಗಳು ಅಪರಿಮಿತ ಆನಂದವನ್ನು ಬಯಸಿವೆ, ಅವಳ ದೇಹ ಸೌಂದರ್ಯ ಸಾಗರದಷ್ಟು ಆನಂದವನ್ನು ವ್ಯಕ್ತಪಡಿಸಿದೆ. ಅವಳು ಹುಟ್ಟು ಮತ್ತು ಪರಿಶ್ರಮದ ಜೊತೆಗೆ ಹಣೆ ಬರಹವನ್ನು ಮೀರಿ ನಿಂತಿದ್ದಾಳೆ. ನಿಧಾನವಾಗಿ ವೃತ್ತಾಕಾರವಾಗಿ ಚಲಿಸುವಲ್ಲಿ ಅವಳು ಕರೆಯನ್ನು ಕೇಳುತ್ತಾ ನಿಂತಿದ್ದಾಳೆ; ಕಾಲದ ಭಯಂಕರವಾದ ಬುನಾದಿಯನ್ನು ಅವಳ ಸ್ಪರ್ಶ ಮಾತ್ರ ಬದಲಿಸಬಲ್ಲದು, ಅವಳ ರಹಸ್ಯವನ್ನು ಅಜ್ಞಾನ ಮರೆ ಮಾಚಿದೆ; ಚೈತನ್ಯದ ರಸವಿದ್ಯೆಯ ಶಕ್ತಿ ಅವಳದೇ ಆಗಿದೆ; ಅವಳು ಸ್ವರ್ಣ–ಸೇತುವೆ, ಅದ್ಭುತವಾದ ಜ್ಯೋತಿ ಅಜ್ಞೇಯಳಾದ ಅವಳು ಪ್ರಕಾಶಮಾನವಾದ ಹೃದಯದವಳು, ಪರಮಾತ್ಮನ ಅಂತರಾಳದ ಶಾಂತಿಯ ಶಕ್ತಿ ಅವಳಾಗಿದ್ದಾಳೆ; ಅವಳೇ ಶಕ್ತಿ, ಅನಿವಾರ್ಯ ಪದ, ನಮ್ಮ ಕಷ್ಟದ ಆರೋಹಣದಲ್ಲಿನ ಸೂಜಿಗಲ್ಲು, ಅವಳ ಬೆಳಕಿನಿಂದ ನಮ್ಮೆಲ್ಲಾ ದೀಪಗಳನ್ನು ಬೆಳಗಿಸಿಕೊಳ್ಳುವೆವು, ಸಾಧಿಸದ ವಿಶಾಲತೆಯಿಂದ ಬೆಳಕು ಬಾಗುವುದು, ಅಸಾಧ್ಯದಿಂದ ಆನಂದವು ಕಣ್ಣಿನ್ನೆಯಿಂದ ಕರೆಯುವದು. ಎಲ್ಲಕ್ಕಿಂತ ಸರ್ವಶಕ್ತವು ಇನ್ನೂ ಕೆಳಗಿಳಿದು ಬಂದಿಲ್ಲಾ, ಪ್ರಕೃತಿಯಲ್ಲಿ ಆಕೆಯನ್ನು ಮಾತ್ರ ಮೌನವಾಗಿಯೇ ಕರೆಯುತ್ತಿವೆ, ತಮ್ಮ ಜೀವನದ ಸಂಕಟವನ್ನು ಅವಳ ಸ್ಪರ್ಶವು ಉಪಶಮನಿಸಲಿ

ಮತ್ತು ಮನುಷ್ಯನ ಆತ್ಮದ ಆ ಮಂಕಪೊರೆಯನ್ನು ಹೊಡೆದು ಹಾಕಲೆಂದು ಮತ್ತು ಮುಚ್ಚಿದ ಹೃದಯದಲ್ಲಿ ಜ್ಯೋತಿಯನ್ನು ಬೆಳಗಿಸಲೆಂದು ಒಂದು ದಿನ ಇಲ್ಲಿ ಎಲ್ಲವೂ ಅವಳ ಮಧುರತೆಯ ಮನೆಯಾಗಲಿ, ಇಲ್ಲಿ ಎಲ್ಲಾ ವೈರುದ್ಧತೆಗಳು ಅವಳ ಸಾಮರಸ್ಯವನ್ನು ಸಿದ್ದಗೊಳಿಸಲಿ; ನಮ್ಮ ಜ್ಞಾನವು ಅವಳೆಡೆಗೆ ಆರೋಹಿಸುವುದು, ನಮ್ಮ ತುಡಿತವು ತಡವರಿಸುತ್ತಿದೆ; ಅವಳ ಅದ್ಭುತವಾದ ಆನಂದದಲ್ಲಿ ನಾವೆಲ್ಲಾ ಜೀವಿಸೋಣ, ಅವಳ ಅಪ್ಪುಗೆ ನಮ್ಮೆಲ್ಲಾ ನೋವನ್ನು ಆನಂದವನ್ನಾಗಿ ಪರಿವರ್ತಿಸುವುದು.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 34/314**

## 24ನೇ ಏಪ್ರಿಲ್ 1961

ಅಂತರಂಗದ (ಆತ್ಮದ) ಸಂಬಂಧವೆಂದರೆ ಶ್ರೀಮಾತೆಯ ಸಾನಿಧ್ಯವನ್ನು ಸಂವೇದಿಸುವುದು, ಎಲ್ಲ ಸಮಯದಲ್ಲಿ ಅವಳೆಡೆಗೆ ಗಮನ ತೋರುವುದು, ಅವಳ ಶಕ್ತಿಯ ಸಂಚಲನವನ್ನು, ಮಾರ್ಗದರ್ಶಿತನವನ್ನು, ಸಹಕರಿಸುವುದನ್ನು ಅರಿತುಕೊಳ್ಳುವುದು, ಅವಳೆಡೆ ಸಂಪೂರ್ಣ ಪ್ರೀತಿ ಮತ್ತು ಯಾವಾಗಲೂ ಅತ್ಯಂತ ಸಾಮೀಪ್ಯವನ್ನು – ಅದೂ ಭೌತಿಕವಾಗಿ ಸಮೀಪವಿದ್ದರೂ ದೂರವಿದ್ದರು ಸಂವೇದಿಸುವುದು – ಈ ಸಂಭಂದ ಮನಸ್ಸು ಪ್ರಾಣ ಮತ್ತು ಅಂತರ ಭೌತಿಕವನ್ನು ಶ್ರೀಮಾತೆಯ ಮನಸ್ಸಿನ ಸನಿಹ, ನಮ್ಮ ಪ್ರಾಣವನ್ನು ಅವಳ ಸಾಮರಸ್ಯದ ಸನಿಹ ಮತ್ತು ನಮ್ಮ ಭೌತಿಕ ಪ್ರಜ್ಞೆಯನ್ನು ಅವಳ ಪ್ರಜ್ಞೆಯೊಂದಿಗೆ ಕೂಡಿಸಿಕೊಳ್ಳುವುದು.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 32/454**

## 24ನೇ ಏಪ್ರಿಲ್ 1962

ಗೆಲುವು ಖಚಿತ, ನಾವು ಬಿಟ್ಟುಕೊಡದೆ ಇದ್ದರೆ ಮತ್ತು ಎಂತಹದೆ ಕಷ್ಟದ ಬೆಲೆಯನ್ನಾದರು ತೆತ್ತು ಮತ್ತು ನಮ್ಮ ಸತತ ಪ್ರಯತ್ನ ತುಂಬಾ ಬೃಹತ್ತಾಗಿರಬೇಕು ಅಂದರೆ ಗೆಲುವು ಖಚಿತ. ಏಕೆಂದರೆ ಗೆಲುವು ಕೂಡ ದೊಡ್ಡದಲ್ಲವೆ?

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 31/760**

## 24ನೇ ಏಪ್ರಿಲ್ 1963

ತನ್ನ ಎಲ್ಲಾ ಆಸೆಗಳಲ್ಲಿ ಮತ್ತು ತೊಂದರೆಗಳಲ್ಲಿ ಆತ್ಮವು ಶ್ರೀಮಾತೆಯ ಆತ್ಮದ ಬಳಿಗೆ ಹೋಗುವುದು, ದೈವೀ ಮಾತೆಯು ಅದೇ ರೀತಿ ಬಯಸುತ್ತಾಳೆ, ಕಾರಣ ತನ್ನ ಹೃದಯದ ಪ್ರೇಮವನ್ನು ಧಾರೆ ಹರಿಸಬಹುದೆಂದು ಇಚ್ಛಿಸುತ್ತಾಳೆ. ಆದರೆ ಸ್ವಾಭಾವಿಕವಾಗಿ ಇರುವ ಇಂತಹ ಪ್ರೀತಿಗಾಗಿ ಮತ್ತು ಇಂತಹ ಉತ್ತಮವಾದ ನೆಲೆ, ಹಾಗೂ ಎಲ್ಲಿ ನಮಗೆ ವಿಶ್ರಾಂತಿ ಸಿಗುತ್ತದೆಯೊ ಅದನ್ನು ಬಿಟ್ಟು ಅಲೆದಾಡುತ್ತಿದ್ದೇವೆ, ಹೀಗಾದರೂ ನಾವು ಅವಳೆಡೆಗೆ ಹೋಗಬಯಸುತ್ತೇವೆ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 23/568**

## 24ನೇ ಏಪ್ರಿಲ್ 1964

ಧಾರ್ಮಿಕ ಆಲೋಚನೆ ಮತ್ತು ಅನುಭವಗಳಲ್ಲಿನ ನಿಮ್ನತೆ, ಸಂಕುಚಿತತೆ ಮತ್ತು ಆಳವಿಲ್ಲದಿರುವಿಕೆಯನ್ನು ತ್ಯಜಿಸಿರಿ, ಕ್ಷಿತಿಜದ ವಿಶಾಲಕ್ಕಿಂತ ವಿಶಾಲವಾಗಿರಿ, ಉನ್ನತ ಕಾಂಚನಗಂಗಕ್ಕಿಂತ ಉನ್ನತವಾಗಿರಿ, ಆಳವಾದ ಸಾಗರಕ್ಕಿಂತ ಆಳವಾಗಿರಿ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 12/434**

## 24ನೇ ಏಪ್ರಿಲ್ 1965

ನಿಮಗೆ ಎಷ್ಟು ಸಾಧ್ಯವೋ ಅಷ್ಟು ಸರಿಯಾಗಿಯೇ ಶ್ರಮಿಸಿರಿ; ನಂಬಿರಿ ಮತ್ತು ನಿಮ್ಮ ನಂಬಿಕೆಗೆ ಕೊನೆಗೆ ಸಮರ್ಥನೆ ಸಿಕ್ಕೇ ಸಿಗುವುದು.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 12/156**

## 24ನೇ ಏಪ್ರಿಲ್ 1966

ನಾನು ಈಗಾಗಲೆ ಜಗತ್ತಿನ ಕೆಟ್ಟ ಸ್ಥಿತಿಯ ಬಗ್ಗೆ ಮಾತನಾಡಿದ್ದೇನೆ, ಸಾಮಾನ್ಯವಾಗಿ ರಹಸ್ಯವಾದಿಗಳ ಅಭಿಪ್ರಾಯ ಮಾತ್ರ – ಅದು ಬಹಳ – ಕೆಟ್ಟದ್ದಾಗಿದೆ, ಹೆಚ್ಚಾಗಿ ಮೇಲಿನಿಂದ ಇರುವ ಒಂದು ಹಸ್ತಕ್ಷೇಪ, ಅದು ಒಂದು ಹೊಸ ದರ್ಶನವನ್ನು ಕೊಡುವ ಸಂದರ್ಭ ಬಹುಶಃ ಆಗಬಹುದು, ಸಾಮಾನ್ಯವಾಗಿ ಮನಸ್ಸಿಗೆ ಇದು

ತಿಳಿಯುವುದಿಲ್ಲ, ಒಂದು ಮಾತನ್ನು ನಂಬಬೇಕು, ಇಲ್ಲವಾದರೆ ಸಹಿತ ಕಾಯಬೇಕು ಮತ್ತು ನೋಡಬೇಕು. ದೈವವು ಗಂಭೀರವಾಗಿ ಏನನ್ನೋ ಮಾಡಲು ಪ್ರಯತ್ನಿಸುತ್ತಿದೆ, ನಾನು ನಂಬಿದ ಹಾಗೆ ಅದರ ಉದ್ದೇಶ ಅದೆ ಆಗಿದೆ, ಸುಪ್ರಮಾನಸ ಸತ್ಯ ಮತ್ತು ಅದು ಪ್ರಕೃತಿಯ ಸ್ವಭಾವದಲ್ಲಿ ಆಗಮಿಸುವುದು ಅನಿವಾರ್ಯ ಎಂದು ಪೂರ್ಣಪ್ರಮಾಣದ ನಂಬಿಕೆ ನನಗಿದೆ. ಪ್ರಶ್ನೆ ಏನೆಂದರೆ ಯಾವಾಗ ಮತ್ತು ಹೇಗೆ, ಅದು ಕೂಡ ಎಲ್ಲೋ ಮೇಲಿನಿಂದ ಘಟಿಸಲಿರುವ ಪೂರ್ವನಿರ್ಧರಿತ ನಿರ್ಧಾರವೇ ಇದಾಗಿದೆ; ಆದರೆ ಅದು ಇಲ್ಲಿರುವ ವೈರುದ್ಯದ ಶಕ್ತಿಗಳೊಂದಿಗೆ ಕಠೋರ ಯುದ್ಧ ಮಾಡುತ್ತಿದೆ, ಈ ಭೂಜಗತ್ತಿನಲ್ಲಿ ಪೂರ್ವನಿರ್ಧರಿತ ಪರಿಣಾಮ ಅಡಗಿಕೊಂಡಿದೆ ಮತ್ತು ನಾವು ಏನು ನೋಡುತ್ತಿದ್ದೆವೋ ಅದು ಸಾಧ್ಯತೆಯ ಸೂಕ್ಷ್ಮಗಳು ಮಾತ್ರ ಮಾನವನ ಕಣ್ಣುಗಳಿಗೆ ಮರೆಯಾಗಿ, ಏನನ್ನೋ ಸಾಧಿಸಲು ಶಕ್ತಿಗಳು ಪ್ರಯತ್ನಿಸುತ್ತಿವೆ. ಇದು ಈಗಲೆ ಆಗಬೇಕೆಂಬುವುದಕ್ಕೆ ಬಹಳ ಜೀವಿಗಳನ್ನು ಕಳುಹಿಸಿಕೊಟ್ಟಿದ್ದೆ ಸಾಕ್ಷಿ. ಅದು ನಿಜವಾದ ಪರಿಸ್ಥಿತಿ. ನನ್ನ ನಂಬಿಕೆ ಮತ್ತು ಸಂಕಲ್ಪ ಈಗಲೆ ಆಗಬೇಕೆಂಬುದಿದೆ. ನಾನು ಖಂಡಿತವಾಗಿ ಮನುಷ್ಯನ ಬುದ್ಧಿವಂತಿಕೆ, ಅತೀಂದ್ರಿಯದ ತಾರ್ಕಿಕದ ಬಗ್ಗೆ ಮಾತನಾಡುತ್ತಿದ್ದೇನೆ. ಈ ರೀತಿ ಹೇಳಬಹುದೇನೋ ಅಷ್ಟೇ. ಇನ್ನು ಹೆಚ್ಚಿಗೆ ಹೇಳಿದರೆ ಆ ರೇಖೆ ದಾಟಿದಂತೆ ಆಗುತ್ತದೆ. ನೀನು ನನ್ನನ್ನು ಭವಿಷ್ಯ ಹೇಳಲು ಬಯಸುವುದಿಲ್ಲವೆಂದು ನಾನು ಅಂದುಕೊಂಡಿದ್ದೇನೆ? ಒಬ್ಬ ವಿಚಾರವಾದಿಯಾಗಿ ನೀನು ಆ ರೀತಿ ಮಾಡುವುದಿಲ್ಲ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 35/334 – ಶ್ರೀ ಅರವಿಂದರು**

ಈ ದೇಹದ ಭೌತಿಕ ಅಸ್ತಿತ್ವದ ಬಗ್ಗೆ ಸವಿಸ್ತಾರವಾಗಿ ಪ್ರಶ್ನೆ ಕೇಳಬೇಡಿ ಅವುಗಳು ಅಷ್ಟಾಗಿ ಆಸಕ್ತಿದಾಯಕವಲ್ಲಾ ಮತ್ತು ಗಮನ ಕೊಡಬೇಕಾಗಿಲ್ಲ.

ಈ ಜೀವನ ಪೂರ್ತಿ, ಗೊತ್ತಿದ್ದೂ ಅಥವಾ ಗೊತ್ತಿಲ್ಲದೆಯೋ, ಭಗವಂತನು ನನ್ನಿಂದ ಏನು ಮಾಡಬಯಸಿದ್ದನೋ ಅದನ್ನೆ ಮಾಡಿದ್ದೇನೆ. ಅದೊಂದೇ ಪ್ರಮುಖವಾದದ್ದು.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 13/45 – ಶ್ರೀಮಾತೆ**

## 24ನೇ ಏಪ್ರಿಲ್ 1967

ಇದೆಲ್ಲದರ ನಂತರ ಜೀವಿಯಲ್ಲಿಯ ಸಂಕಲ್ಪವು ಆ ಸಂದರ್ಭಕ್ಕೊಂದು ಬೆಲೆಯನ್ನು ತರುತ್ತದೆ, ಬಹಳ ಸಲ ಬಯಸದ ಬೆಲೆಯೂ ಆಗಿರಬಹುದು; ತೋರಿಕೆಯ ವಾಸ್ತವತೆಯು ತಪ್ಪುದಾರಿಗೆಳೆಯುವ ಸೂಚಕದ ಬಣ್ಣ ಹೊಂದಿರುತ್ತದೆ. ಜನಾಂಗದ ಅಥವಾ ನಾಗರೀಕತೆಯ ಸಂಕಲ್ಪವು ಸಾವಿನಕಡೆ ಇದ್ದರೆ, ಒಂದು ವೇಳೆ ಅದು ಬಳಲಿಕೆಯ ನಾಶದೆಡೆಗೆ ಮತ್ತು ಚೈತನ್ಯರಹಿತ ತಟಸ್ಥ ನೀತಿ ಪಾಲಿಸಿದರೆ ಅಥವಾ ಸತ್ವದಲ್ಲಿ ಕೂಡಾ ಕುರುಡಾಗಿ ನಾಶದ ಕಡೆ ಒಲವು ತೋರಿದರೆ ಅಥವಾ ತನ್ನ ಗತಕಾಲವನ್ನು ಮಾತ್ರ ವೈಭವೀಕರಿಸಿ ಭವಿಷ್ಯತ್ತನ್ನು ಮರೆತರೆ, ಜೀವನಕ್ಕಾಗಿ ಜೀವನವನ್ನು ಮಾತ್ರ ಆರಿಸಿಕೊಂಡರೆ, ಯಾವುದೂ ಕೂಡ, ಹೇರಳವಾದ ಶಕ್ತಿ ಮತ್ತು ಸಂಪನ್ಮೂಲಗಳು ಮತ್ತು ಬುದ್ಧಿವಂತಿಕೆ ಕೂಡ ಇಲ್ಲಿ ಉಪಯೋಗವಾಗದೇ ಇರಬಹುದು. ಬಹಳಷ್ಟು ಜನ ಜೀವಿಸಲು ಇಚ್ಛೆಪಟ್ಟರೂ ಕೂಡ ಮತ್ತು ನಿರಂತರವಾಗಿ ಕೊಟ್ಟ ಅವಕಾಶಗಳೂ ಕೂಡ ಅನಿವಾರ್ಯ ವಿಘಟನೆ ಅಥವಾ ಕುಸಿತಗಳನ್ನು ತಡೆ ಹಿಡಿಯದು. ಆದರೆ ತನ್ನಲ್ಲೆ ಅದಕ್ಕೆ ಶಕ್ತಿಯುತವಾದ ಒಂದು ನಂಬಿಕೆ ಮತ್ತು ಬದುಕಬೇಕೆಂಬ ಗಟ್ಟಿ ಸಂಕಲ್ಪ ಬಂದರೆ, ಮುಂದೆ ಏನೇ ಬಂದರೂ ಅದಕ್ಕೆ ಒಪ್ಪಿದರೆ, ಭವಿಷತ್ತನ್ನು ಒಪ್ಪುವ ಸಂಕಲ್ಪ ಮಾಡಿದರೆ ಮತ್ತು ಅದು ಏನನ್ನು ದಯಪಾಲಿಸುತ್ತೊ ಅದನ್ನು ಒಪ್ಪಿಕೊಂಡು, ವ್ಯತಿರಿಕ್ತ ಇದ್ದದ್ದನ್ನೂ ಒಪ್ಪಿಕೊಂಡು, ವ್ಯತಿರಿಕ್ತದಿಂದ ಮೇಲೆ ಬಂದು ಮತ್ತು ಸೋಲು ಒಂದು ಶಕ್ತಿಯ ಅಜೇಯ ಗೆಲುವೆಂದು ಮತ್ತು ತೋರಿಕೆಯ ಅಸಹಾಯಕತನದಿಂದ ಎದ್ದು ಮತ್ತು ನಶಿಸುವುದನ್ನು ಸತತವಾಗಿ ನವೀಕರಿಸುವ ಅಗಾಧ ಜ್ವಾಲೆಯಲ್ಲಿ ನಿವಾರಿಸಿ, ಹೆಚ್ಚು ಅದ್ಭುತವಾದ ಜೀವನದೆಡೆಗೆ ಸಾಗುವುದನ್ನೇ – ಇದನ್ನೇ – ಭಾರತೀಯ ನಾಗರಿಕತೆ ಅರಿತುಕೊಂಡು ಮಾಡಬೇಕಾಗಿದೆ. ಇದನ್ನು ಯಾವಾಗಲೂ ಅದು ಚೈತನ್ಯದ ಅನವರತ ಶಕ್ತಿಯೊಂದಿಗೆ ಮಾಡುತ್ತಾ ಬಂದಿದೆ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 20/85 – ಶ್ರೀ ಅರವಿಂದರು**

## 24ನೇ ಏಪ್ರಿಲ್ 1968

ಆಧ್ಯಾತ್ಮಿಕದ ಕ್ರಮಬದ್ಧತೆಯಲ್ಲಿ ನಾವು ನಮ್ಮ ದೃಷ್ಟಿಕೋನವನ್ನು ಉನ್ನತಕ್ಕೆ ಹರಿಸಿದರೆ ಮತ್ತು ನಮ್ಮ ಅಭೀಪ್ಸೆಯಿಂದ ಹೆಚ್ಚಿನ ಸತ್ಯವು ನಮ್ಮಲ್ಲಿ ಇಳಿದು ಬರಲು ಪ್ರಯತ್ನಿಸುತ್ತದೆ, ಏಕೆಂದರೆ ಅದು ಈಗಾಗಲೆ ನಮ್ಮೊಳಗೇ ಇದೆ ಮತ್ತು ಪ್ರಕಟಗೊಂಡ ಪ್ರಕೃತಿಯಲ್ಲಿ ಯಾವುದು ಮುಚ್ಚಿ ಮರೆಯಾಗಿದೆಯೋ ಅದನ್ನು ಹೊರತರಲು ಕರೆಯುತ್ತದೆ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 21/284**

## 24ನೇ ಏಪ್ರಿಲ್ 1969

ಅತ್ಯಂತ ಉತ್ತಮವಾದ ಮಾರ್ಗವೆಂದರೆ ದೈವೀ ಕೃಪೆಯು ನಿಮ್ಮೊಳಗೆ ಕೆಲಸ ಮಾಡಲು ಅನುವು ಮಾಡಿಕೊಡಿ, ಅದಕ್ಕೆ ವಿರೋಧಿಸದಿರಿ, ಕೃತಘ್ನರಾಗಿ ಮತ್ತು ಅದಕ್ಕೆ ವಿರುದ್ಧವಾಗಿ ನಿಲ್ಲದಿರಿ. ಅದನ್ನು ಅನುಸರಿಸಿರಿ, ಬೆಳಕಿನೆಡೆಗೆ, ಮತ್ತು ಶಾಂತಿಯೆಡೆಗೆ ಮತ್ತು ಏಕತೆಯೆಡೆಗೆ ಮತ್ತು ಆನಂದದೆಡೆಗೆ ಹೋಗುವುದನ್ನು ಅನುಸರಿಸಿ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 29/174**

## 24ನೇ ಏಪ್ರಿಲ್ 1970

ಒಬ್ಬ ಸರಿಯಾದ ವ್ಯಕ್ತಿಯ ಬೇಡಿಕೆ ಏನೆಂದರೆ, ಸರ್ವೋಚ್ಚ ಸತ್ಯವನ್ನು ತಿಳಿಯುವುದು ಮತ್ತು ಅದರೊಂದಿಗೆ ಸಾಮರಸ್ಯದೊಂದಿಗೆ ಇರುವುದು, ನಾವೇನಿದೇವೆಯೋ ಅದರಲ್ಲಿ ಅದನ್ನು ವ್ಯಕ್ತಗೊಳಿಸುವುದು, ಅನುಭವಿಸುವುದು ಮತ್ತು ಅದರಂತೆ ಕಾರ್ಯಮಾಡುವುದು ಸರಿಯಾದ ರೀತಿಯ ಜೀವನದ ಬೇಡಿಕೆಯಾಗಿದೆ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 23/374–75 – ಶ್ರೀ ಅರವಿಂದರು**

## 24ನೇ ಏಪ್ರಿಲ್ 1971

ಯಾರು ಸತ್ಯವನ್ನು ಅಭೀಪ್ಸೆ ಮಾಡುವರೋ ಅವರು ಸುಳ್ಳನ್ನು ಹೇಳುವುದರೊಂದಿಗೆ ದೂರವಿರಬೇಕು.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 15/187 – ಶ್ರೀಮಾತೆ**



ನಾನು ಪೂಜಿಸಿಗೊಳ್ಳುವುದನ್ನು ಬಯಸುವುದಿಲ್ಲ. ನಾನು ಕೆಲಸ ಮಾಡಲು ಬಂದಿದ್ದೇನೆ, ಪೂಜಿಸಿಗೊಳ್ಳಲು ಅಲ್ಲ; ಅವರು ನಿನ್ನನ್ನು ಬೇಕಾದರೆ ಹೃದಯ ತುಂಬುವುದಕ್ಕಾಗಿ ಪೂಜಿಸಲಿ. ನಾನು ಶಾಂತವಾಗಿ ಅದೂ ಏಕಾಂತದಲ್ಲಿ, ನನ್ನ ಕೆಲಸವನ್ನು ನಿರಾತಂಕವಾಗಿ ಮಾಡಲು ನನ್ನನ್ನು ಬಿಡಲಿ – ಎಲ್ಲಾ ಮುಸುಕುಗಳಲ್ಲಿ ದೇಹವೆ ಉತ್ತಮವಾದದ್ದು.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 13/46** **– ಶ್ರೀಮಾತೆ**

## 24ನೇ ಏಪ್ರಿಲ್ 1972

ಅವನು ನಮ್ಮ ಕತ್ತಲೆಯ ಭಾಗಗಳಲ್ಲಿ ಕಾಣಿಸದೆ ಬರುವನು ಮತ್ತು, ಕತ್ತಲೆಯ ಪರದೆ ಹೊದ್ದು, ಅವನು ಕೆಲಸ ಮಾಡುವನು, ಒಬ್ಬ ಸೂಕ್ಷ್ಮ ಮತ್ತು ಎಲ್ಲಾ ತಿಳಿದ ಅತಿಥಿ ಮತ್ತು ಮಾರ್ಗದರ್ಶಿಯಾಗಿ, ಎಲ್ಲರಿಗೂ ಎಲ್ಲಿಯ ತನಕ ಅವಶ್ಯ ಮತ್ತು ಪರಿವರ್ತನೆಗೊಳ್ಳುವ ಸಂವೇದನೆ ಬರುವವರೆಗೆ, ಇಲ್ಲಿ ಎಲ್ಲರೂ ಉನ್ನತವಾದ ತತ್ವವನ್ನು ಪಾಲಿಸಲು ಕಲಿಯಬೇಕು, ನಮ್ಮ ದೇಹದ ಜೀವಕೋಶಗಳು ಆ ಅಮರ ಜ್ಯೋತಿಯನ್ನು ಹಿಡಿದಿಟ್ಟುಕೊಳ್ಳಬೇಕು.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 33/35**

## 24ನೇ ಏಪ್ರಿಲ್ 1973

ಮನುಷ್ಯನ ಪ್ರಜ್ಞೆಯಾಚೆ,
ಮಾತುಗಳಾಚೆ,
ಓ ನೀನು, ಪರಮೋಚ್ಛ ಪ್ರಜ್ಞೆ,
ಅನನ್ಯ, ನಿಜ, ದೈವೀ ಸತ್ಯ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 15/188**



**ಸಚ್ಚಿದಾನಂದ**

ಶಕ್ತ ಮತ್ತು ಶುದ್ಧ, ಅದು ತನ್ನ ಸೃಜನಶೀಲ ಶಕ್ತಿಯಿಂದ ನೇರವಾಗಿ ನಿಂತಿದೆ.

ಬಟಾನಿಕಲ್ ಹೆಸರು: ಹೆಡಿಶಿಯಮ್

# ಸ್ಮರಣೆಗಳು

– ಅನುವಾದ: ನಾಗಜ್ಯೋತಿ ಯಲಿವಾರ

**ಪ್ರಜ್ಞಾಪೂರ್ವಕ ಯೋಗ ಮತ್ತು ತೀವ್ರವಾದ ಮಾನಸಿಕ ಬೆಳವಣಿಗೆ**

ನಾನು ಸುಮಾರು ಇಪ್ಪತ್ತೊಂದು ವರ್ಷದವಳಿದ್ದಾಗ, ನನ್ನ ಜೀವನದ ದೃಷ್ಟಿಕೋನವು ಬದಲಾಯಿತು. ಅನುಭವಗಳ ಅಪೂರ್ವ ಸರಣಿಯೇ ನಡೆಯಿತು, ಪ್ರಾಣದ ಅಭಿವೃದ್ಧಿಯ ಹಾಗೆಯೇ ಗುಹ್ಯ(ರಹಸ್ಯ)ವಿದ್ಯೆಯ ಆಸಕ್ತಿಯುತ ಪ್ರತಿಫಲಗಳು ದೊರಕಿದವು.

ನಂತರ, ತೀವ್ರವಾದ ಮಾನಸಿಕ ಬೆಳವಣಿಗೆಯ ಅವಧಿ, ಅಲ್ಲಿ ಸಂಪೂರ್ಣವಾದ ಮಾನಸಿಕ ಬೆಳವಣಿಗೆಯಾಯಿತು: ಎಲ್ಲಾ ತತ್ತ್ವಶಾಸ್ತ್ರಗಳ ಅಧ್ಯಯನ, ಎಲ್ಲಾ ಪರಿಕಲ್ಪನಾ ಕುಶಲತೆ, ಪ್ರತಿಯೊಂದನ್ನೂ ವಿವರವಾಗಿ ಪ್ರತಿ ವ್ಯವಸ್ಥೆಗಳ ಆಳವಾದ ಅಧ್ಯಯನ ಮಾಡುವುದು, ಅವುಗಳ ಮೇಲೆ ಗ್ರಹಿಕೆಯನ್ನು ಪಡೆಯುವುದು. ಹೀಗೆ ಹತ್ತು ವರ್ಷಗಳ ತೀವ್ರವಾದ ಮಾನಸಿಕ ಅಧ್ಯಯನವು ನನ್ನನ್ನು ಶ್ರೀ ಅರವಿಂದರೆಡೆಗೆ ಕರೆದೊಯ್ಯಿತು.

ಹಾಗಾಗಿ ನಾನು ಈ ಎಲ್ಲಾ ಸಿದ್ಧತೆಗಳನ್ನು ಹೊಂದಿದ್ದೆ. ಮತ್ತು ನಾನು ನಿಮಗೆ ಈ ವಿವರಗಳನ್ನು ಏಕೆ ನೀಡುತ್ತಿದ್ದೇನೆಂದರೆ, ಇಲ್ಲಿ ಎಲ್ಲವೂ ಪ್ರಜ್ಞೆಯಿಂದಲೇ(ಚೈತನ್ಯದಿಂದಲೇ) ಪ್ರಾರಂಭವಾಯಿತು (ಪ್ರಜ್ಞೆಯನ್ನು ವಿವರಿಸಲು ನನಗೆ ಯಾವುದೇ ಆಲೋಚನೆ ಇರುವ ಮೊದಲೇ ಅದು ನನಗೆ ಚೆನ್ನಾಗಿ ತಿಳಿದಿತ್ತು.) ಪ್ರಜ್ಞೆ ಮತ್ತು ಅದರ ಶಕ್ತಿ–ಕ್ರಿಯಾತ್ಮಕ ಶಕ್ತಿ, ಕಾರ್ಯನಿರ್ವಾಹಕ ಶಕ್ತಿ, ಮುಂದೆ, ವಿವರವಾದ ಪ್ರಾಣದ ಅಧ್ಯಯನ ಮತ್ತು ಅದರ ಸಮಗ್ರ ಪ್ರಗತಿಯಾಯಿತು. ಅದರ ನಂತರ, ಮಾನಸಿಕ ಅಭಿವೃದ್ಧಿಯು ಅದರ ಉಚ್ಚತರ ಮಿತಿಯನ್ನು ತಲುಪಿತು, ಅಲ್ಲಿ ಎಲ್ಲಾ ವಿಚಾರಗಳನ್ನು ಚಮತ್ಕರಿಸಬಹುದು; ಇದೊಂದು ಬೆಳವಣಿಗೆ ಹಂತ, ಇಲ್ಲಿ ಎಲ್ಲಾ ವಿಚಾರಗಳು ಸತ್ಯವೇ ಆಗಿದ್ದು, ಅವುಗಳನ್ನು ಸಮನ್ವಯದಾಚೆಗೆ ಗಮನಿಸುವದೇ ಸತ್ಯವಾದುದು ಮತ್ತು ಪ್ರಕಾಶಮಾನವಾದುದು. ನಾನು ಇಲ್ಲಿಗೆ ಬಂದಾಗ ಇಂತಹ ಸ್ಥಿತಿ ಇತ್ತು; ಅನುಭವಗಳ ರಾಶಿಯನ್ನು ಹೊಂದಿದ್ದೆ ಮತ್ತು ಆಗಲೇ ನಾನು ಊರ್ಧ್ವದಲ್ಲಿ ಮತ್ತು ಅಂತರಂಗದಲ್ಲಿ ‘ಪರಮಾತ್ಮನ’ ಪ್ರಜ್ಞಾಪೂರ್ವಕ ಐಕ್ಯತೆಯನ್ನು

ಹೊಂದಿದ್ದೆ. ಶ್ರೀ ಅರವಿಂದರ ಬಳಿಬಂದಾಗ ಎಲ್ಲವನ್ನೂ ಪ್ರಜ್ಞಾಪೂರ್ವಕವಾಗಿ ಸಾಕ್ಷಾತ್ಕರಿಸಿಕೊಂಡು, ಎಲ್ಲವನ್ನೂ ಕಾಳಜಿಯಿಂದ ಬರೆದಿಟ್ಟುಕೊಂಡಿದ್ದೆ.

**– ಶ್ರೀಮಾತೆ: ಶಿಷ್ಯನೊಡನೆ ಸಂಭಾಷಣೆ, ಜುಲೈ 25, 1962**



**ನೆನಪುಗಳು ಚಿಕ್ಕದಾಗಿರುತ್ತವೆ**

ನಾನು ಶ್ರೀ ಅರವಿಂದರನ್ನು ಭೇಟಿಯಾಗಲು ಭಾರತಕ್ಕೆ ಬಂದೆ. ಶ್ರೀ ಅರವಿಂದರೊಂದಿಗೆ ವಾಸಿಸಲು ನಾನು ಭಾರತದಲ್ಲಿಯೇ ಇದ್ದೆ. ಶ್ರೀ ಅರವಿಂದರು ದೇಹತ್ಯಾಗ ಮಾಡಿದಾಗ, 'ಸತ್ಯ'ದ ಸೇವೆಯ ಮತ್ತು ಮಾನವ ಜನಾಂಗವನ್ನು ಜ್ಞಾನೋದಯ–ಗೊಳಿಸುವ ಮೂಲಕ, "ಪರಮಾತ್ಮನ ಪ್ರೀತಿ"ಯ ನಿಯಮವನ್ನು ತ್ವರಿತಗೊಳಿಸಲು ಅವರ ಕೆಲಸವನ್ನು ಮಾಡಲು ನಾನು ಇಲ್ಲಿಯೇ ಇರಲು ಮುಂದುವರೆದೆ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 13/45** **– ಶ್ರೀಮಾತೆ**

## ಕೋಮಲತೆ ಮತ್ತು ವಿಶಾಲತೆ

ಒಮ್ಮೆ, ಬಹಳ ಹಿಂದೆಯೇ, ಶ್ರೀ ಅರವಿಂದರು ತಮ್ಮ ಬಾಲ್ಯದ ಬಗ್ಗೆ, ತಮ್ಮ ರೂಪಿಸುವಿಕೆಯ ಬಗ್ಗೆ ನನಗೆ ಹೇಳುತ್ತಿದ್ದಾರೆ, ಅವರ ಮುಂದೆ ಒಂದು ಪ್ರಶ್ನೆಯನ್ನು, ನಾನು ಅವರಿಗೆ ಕೇಳಿದೆ, "ನಾನು ಏಕೆ, ಒಂದು ವೈಯಕ್ತಿಕ ಅಸ್ತಿತ್ವವಾಗಿ, ತುಂಬಾ ಸಾಧಾರಣವಾಗಿದ್ದೇನೆ? ನಾನು ಏನನ್ನಾದರೂ ಮಾಡಬಲ್ಲೆ; ನಾನು ಏನೆಲ್ಲಾ ಮಾಡಲು ಪ್ರಯತ್ನಿಸಿದ್ದೇನೋ ಅದನ್ನೆಲ್ಲಾ ಮಾಡಿದ್ದೇನೆ. ಆದರೆ ಎಂದೂ ಶ್ರೇಷ್ಠವಾದ ಮಾರ್ಗದಿಂದೇನಲ್ಲ; ಯಾವಾಗಲೂ ಹೀಗೆಯೇ (ಸಾಮಾನ್ಯ ಸ್ವರ ಎಂಬ ಸೂಚನೆ); ಆಗ ಅವರು ಉತ್ತರಿಸಿದರು (ಆ ಸಮಯದಲ್ಲಿ ನಾನು ಅದನ್ನು ದಯೆ ಅಥವಾ ಕರುಣೆಯ ಪ್ರತೀಕವೆಂಬಂತೆ ತೆಗೆದುಕೊಂಡೆ), "ಏಕೆಂದರೆ ಅದು ಶ್ರೇಷ್ಠವಾದ ಹೊಂದಿಕೊಳ್ಳುವಿಕೆಯನ್ನು ಮತ್ತು ವಿಶಾಲವಾದ ವ್ಯಾಪ್ತಿಯನ್ನು ತರುತ್ತದೆ; ಏಕೆಂದರೆ ಯಾರೂ ಒಂದು ಕ್ಷೇತ್ರದಲ್ಲಿ ಪರಿಪೂರ್ಣರಿರುತ್ತಾರೋ ಅವರು "ಕೇವಲ ಒಂದೇ ಕ್ಷೇತ್ರದಲ್ಲಿ ವೈಶಿಷ್ಟ್ಯತೆಯನ್ನು ಪಡೆದು ಕೇಂದ್ರೀಕೃತಗೊಂಡಿರುತ್ತಾರೆ." ನಾನು ಹೇಳಿದ ಹಾಗೆ, ನಾನು ಇದನ್ನು ಸುಮ್ಮನೆ ಮಗುವಿಗೆ ರಮಿಸಲು ಹೇಳಿದ ಹಾಗೆ ತೆಗೆದುಕೊಂಡೆ. ಆದರೆ ಈಗ ತಿಳಿದುಕೊಂಡಿರುವ ಅತೀ ಮುಖ್ಯವಾದ ವಿಷಯವೇನೆಂದರೆ, ಎಲ್ಲಿಯೂ ನೆಲೆಯೂರಬಾರದು; ಯಾವುದೋ ಸಾಕ್ಷಾತ್ಕಾರದ ಪರಿಪೂರ್ಣತೆಯಂತೆ ಯಾವುದನ್ನು ನಿರ್ದಿಷ್ಟವಾಗಿ ನೆಲೆಯೂರಬಾರದು – ಹಾಗೆ ಮಾಡಿದರೆ ಪ್ರಗತಿಯ ಹಾದಿಯಲ್ಲಿ ಅಂತಿಮವಾಗಿ ನಿಂತಂತೆ. ಅಸಾಧ್ಯತೆಯ ಭಾವನೆಯು (ನಾನು ಆಗಲೇ ಹೇಳಿದ ಸಾಧಾರಣದ ಅರ್ಥ, ಭಯ ಯಾವುದೇ ರೀತಿಯಿಂದ ವಿಶಿಷ್ಟವಾದುದೇನಲ್ಲ) ನಿಮ್ಮನ್ನು ಯಾವುದೋ ಉನ್ನತದ ಬಗ್ಗೆ ನಿರೀಕ್ಷೆಯನ್ನು ತರುತ್ತದೆ (ಉರ್ಧ್ವಮುಖ ಅಭೀಪ್ಸೆಯ ಸೂಚನೆ). ಹಾಗಾಗಿ ಅತಿ ಮುಖ್ಯವಾದ ವಿಷಯವೇನೆಂದರೆ – ಹೊಂದಿಕೊಳ್ಳುವಿಕೆ, ಹೊಂದಿಕೊಳ್ಳುವಿಕೆ ಮತ್ತು ವಿಶಾಲತೆ; ಯಾವುದನ್ನೂ ಕೂಡ ಅನುಪಯೋಗವಾದದು ಅಥವಾ ಕೆಟ್ಟದ್ದು ಅಥವಾ ನೀಚತನದ್ದು ಎಂದು ತಿರಸ್ಕರಿಸಬಾರದು; ಯಾವುದನ್ನೂ ಸಹ ಶ್ರೇಷ್ಠವಾದುದು ಸೌಂದರ್ಯಮಯವಾದುದು ಎಂದು ನಿರ್ಧರಿಸಬಾರದು. ಯಾವಾಗಲೂ ನಮ್ಮನ್ನು ನಾವು ತೆರೆದಿಟ್ಟುಕೊಳ್ಳಬೇಕು.

ಇಲ್ಲಿ ಆದರ್ಶವೇನೆಂದರೆ, ಈ ಹೊಂದಿಕೊಳ್ಳುವಿಕೆ ಮತ್ತು ಸ್ವೀಕಾರ ಭಾವ ಮತ್ತು ಸಮರ್ಪಣೆ, ಅದೇನೆಂದರೆ ಯಾವುದೇ "ಪ್ರಭಾವವಿರಲಿ" ಅದನ್ನು ಸಂಪೂರ್ಣವಾಗಿ ಸ್ವೀಕರಿಸುವುದು, ನೈಜವಾಗಿ, ಸಹಜವಾಗಿ, ಸುಲಭವಾಗಿ ನಮ್ಮ ಉಪಕರಣವು ಅದನ್ನು ಅಂಗೀಕರಿಸಿ ಕೂಡಲೇ ವ್ಯಕ್ತಪಡಿಸುವುದು ಇದು ಖಂಡಿತವಾಗಿ ಎಲ್ಲದರ ಜೊತೆ ಮಾಡಬೇಕಾಗಿದೆ: ಕಲೆ, ಸಂಗೀತ ಬರವಣಿಗೆಯಲ್ಲಿಯೂ.

**– ಶ್ರೀಮಾತೆ: ಶಿಷ್ಯನೊಡನೆ ಸಂಭಾಷಣೆ, ಫೆಬ್ರವರಿ 18, 1967**

## ಮೊದಲ ಭೇಟಿ

ನಾನು ದರ್ಶನಗಳ ಸರಣಿಯನ್ನು ಹೊಂದಿದ್ದೆ. (ಭಾರತದ ಬಗ್ಗೆ ನನಗೆ ಏನೂ ತಿಳಿದಿರಲಿಲ್ಲ, ಈ ವಿಷಯ ನಿಮಗೆ ತಿಳಿದಿರಲಿ. ಹೇಗೆ ಹೆಚ್ಚಿನ ಯುರೋಪಿಯರಿಗೆ ಇದರ ಬಗ್ಗೆ ಇದರ ಬಗ್ಗೆ ಏನೂ ತಿಳಿದಿರಲಿಲ್ಲವೋ ಹಾಗೆ): ಸರಿ, ಈ ಹಲವಾರು ದರ್ಶನಗಳಲ್ಲಿ ದೈಹಿಕವಾಗಿ ಕಾಣುವಂತೆಯೇ ನಾನು ಶ್ರೀ ಅರವಿಂದರನ್ನು ನೋಡಿದ್ದೆ, ಆದರೆ ವೈಭವೀಕೃತಗೊಂಡ; ಅಂದರೆ ನನ್ನ ಮೊದಲ ಭೇಟಿಯಲ್ಲಿ ನೋಡಿದ ಅದೇ ವ್ಯಕ್ತಿ, ಬಹುತೇಕ ತೆಳ್ಳಗೆ, ಆ ಚಿನ್ನದ ಕಂಚಿನ ವರ್ಣ ಮತ್ತು ತೀಕ್ಷ್ಣವಾದ ವ್ಯಕ್ತಿಚಿತ್ರ, ಅಶಿಸ್ತಿನ ಗಡ್ಡ ಮತ್ತು ಉದ್ದನೆಯ ಕೂದಲು, ಧೋತಿಯನ್ನು ಧರಿಸಿ ಅದರ ಒಂದು ತುದಿಯನ್ನು ತಮ್ಮ ಭುಜದ ಮೇಲೆ ಹಾಕಿಕೊಂಡಿದ್ದರು. ತೋಳುಗಳು, ಎದೆ, ಪಾದಗಳು ಬರಿಯದಾಗಿದ್ದವು. ಆ ಸಮಯದಲ್ಲಿ ಅದು ದೃಷ್ಟಿ ಉಡುಪು ಎಂದು ನಾನು ಭಾವಿಸಿದ್ದೆ! ನನ್ನ ಪ್ರಕಾರ ನನಗೆ ಭಾರತದ ಬಗ್ಗೆ ಏನೂ ತಿಳಿದಿಲ್ಲ; ಭಾರತೀಯ ರೀತಿಯಲ್ಲಿ ಉಡುಪು ಧರಿಸಿರುವ ಭಾರತೀಯರನ್ನು ನಾನು ನೋಡಿಯೇ ಇರಲಿಲ್ಲ.

ಸರಿ, ನಾನು ಅವರನ್ನು ನೋಡಿದೆ, ಸಾಂಕೇತಿಕ ದರ್ಶನಗಳನ್ನು ಮತ್ತು ಅಧ್ಯಾತ್ಮಿಕ ಸಂಗತಿಗಳನ್ನು ನಾನು ಏಕ ಕಾಲದಲ್ಲೇ ಅನುಭವಿಸಿದೆ; ಸಂಪೂರ್ಣವಾದ ನಿರ್ಣಾಯಕ ಆಧ್ಯಾತ್ಮಿಕ ಅನುಭವಗಳು ಮತ್ತು ಭೇಟಿಯಾಗಿ ಸಾಧಿಸಬೇಕಾದ "ಕಾರ್ಯವನ್ನು" ಜೊತೆಯಾಗಿ ಗ್ರಹಿಸಿದೆವು ಮತ್ತು ಈ ದರ್ಶನಗಳಲ್ಲಿ ನಾನು ದೈಹಿಕವಾಗಿ ಮಾಡದ ಕೆಲಸವನ್ನು ಮಾಡಿದ್ದೇನೆ: ನಾನು ಅವರಿಗೆ ಹಿಂದೂ ಧರ್ಮದ ರೀತಿಯಲ್ಲಿ ಸಾಷ್ಟಾಂಗ ರೀತಿಯಲ್ಲಿ ನಮಸ್ಕರಿಸಿದೆ.

ಇವೆಲ್ಲವನ್ನೂ ನಾನು ಚಿಕ್ಕ ಮೆದುಳಿನಲ್ಲಿ ಯಾವುದೇ ತಿಳುವಳಿಕೆ ಇಲ್ಲದೆ (ನನ್ನ ಪ್ರಕಾರ ನಾನು ಏನು ಮಾಡುತ್ತಿದ್ದೆ ಎಂದು ನನಗೆ ನಿಜವಾಗಿ ತಿಳಿದಿರಲಿಲ್ಲ). ನಾನು ಇದನ್ನೆಲ್ಲಾ ಮಾಡಿದೆ ಮತ್ತು ಅದೇ ಸಮಯದಲ್ಲಿ "ಇದೆಲ್ಲಾ ಏನು? ಎಂದು ಬಹಿರಂಗದ ಅಸ್ತಿತ್ವವು ಕೇಳುತ್ತಿತ್ತು.

ನನಗಾದ ದರ್ಶನದ ಅನುಭವವನ್ನು ಬರೆದಿಡುತ್ತಿದ್ದೆ (ಅಥವಾ ಅದನ್ನು ಆಮೇಲೆ ಬರೆದಿರಬಹುದು) ಆದರೆ ಅದನ್ನು ನಾನು ಯಾರಿಗೂ ಹೇಳಿರಲಿಲ್ಲ (ಇಂತಹ ವಿಷಯಗಳ ಬಗ್ಗೆ ಸಹಜವಾಗಿ ಯಾರೂ ಹೇಳುವುದಿಲ್ಲ). ಆದರೆ ನನ್ನ ಅನಿಸಿಕೆಯ ಪ್ರಕಾರ ಇದು ಮುನ್ಸೂಚನೆಯಾಗಿತ್ತು. ಒಂದು ದಿನ ಈ ತರಹದ ಘಟನೆ ನಡೆಯಬಹುದು, ಮತ್ತು ಈ ವಿಚಾರ ನನ್ನ ಪ್ರಜ್ಞೆಯ ಹಿಂದೆ ಯಾವತ್ತೂ ಇತ್ತು. ಕ್ರಿಯಾತ್ಮಕವೇನಲ್ಲ, ಆದರೆ ಸತತವಾಗಿ ಇತ್ತು.

ನಾನು ಇಲ್ಲಿಗೆ ಬಂದಾಗ.. ಆದರೆ ನನ್ನೊಳಗಿರುವ ಏನೋ ಒಂದು ಶ್ರೀ ಅರವಿಂದರನ್ನು ಮೊದಲ ಬಾರಿ ಏಕಾಂತದಲ್ಲಿ ಭೇಟಿಯಾಗಲು ಬಯಸಿತ್ತು. ನನಗೆ ಮಧ್ಯಾಹ್ನ ಭೇಟಿಯಾಗುವ ಅವಕಾಶ ಸಿಕ್ಕಿತ್ತು. ಅವರು ಈಗಿನ ಹಳೆಯ ಅತಿಥಿ ಗೃಹದಲ್ಲಿದ್ದರು. ನಾನು ಮೆಟ್ಟಿಲುಗಳನ್ನು ಹತ್ತುತ್ತಿದೆ ಮತ್ತು ಅವರು ಅಲ್ಲಿ ನಿಂತಿದ್ದರು, ಮೆಟ್ಟಿಲುಗಳ ತುದಿಯ ಮೇಲೆ ನನಗಾಗಿ ಕಾಯುತ್ತಿದ್ದರು.., ಅದು ನಿಖರವಾಗಿ ನನ್ನ ದರ್ಶನದಲ್ಲಿದ್ದಂತೆಯೇ ಇತ್ತು! ಅದೇ ತರಹದ ಬಟ್ಟೆ ಧರಿಸಿದ್ದರು, ಅದೇ ತರಹದ ಭಂಗಿ, ಅದೇ ವ್ಯಕ್ತಿ ಚಿತ್ರಣ ಹಾಗೂ ತಲೆ ಎತ್ತಿ ನಿಂತಿದ್ದರು. ಅವರು ನನ್ನ ಕಡೆಗೆ ತಿರುಗಿದರು ನಾನು ಅವರ ಕಣ್ಣುಗಳಲ್ಲಿ ನೋಡಿದೆ ಅದು "ಅವರೇ" ಆಗಿದ್ದರು. ಆಗ ಎರಡು ಸಂಗತಿಗಳು ಸಂಭವಿಸಿದವು (ತತ್‌ಕ್ಷಣದ ಆಘಾತವೇ ಇದರ ಸನ್ನೆಯಾಗಿತ್ತು) ಅಂತರಂಗದ ಅನುಭವವು ತಕ್ಷಣ ಹೊರಗಿನ ಅನುಭವದೊಂದಿಗೆ ಒಂದಾಯಿತು. ಇದು ಒಂದು ನಿರ್ಣಾಯಕ ಆಘಾತ.

*

# ಶ್ರೀ ಮಾತೆಯವರಿಗೆ ಶ್ರೀ ಅರವಿಂದರ ಪತ್ರಗಳು

– ಅನುವಾದ: ಡಾ॥ ಮಹಾದೇವ ಸಕ್ರಿ, ವಿಜಯಪುರ

(1)

ಈಗ ಸಮಸ್ತ ಭೂಮಿಯು ಒಂದು ಶಾಸನದ ಅಧೀನದಲ್ಲಿದೆ ಮತ್ತು ಅದೇ ಕಂಪನಗಳಿಗೆ ಉತ್ತರಿಸುತ್ತದೆ ಮತ್ತು ಹೋರಾಟದ ಸಂಘರ್ಷಣವು ನಮ್ಮನ್ನು ಹಿಂಬಾಲಿಸದ ಯಾವುದೇ ಸ್ಥಳವನ್ನು ಶೋಧಿಸುವ ಬಗ್ಗೆ ನನಗೆ ಅನುಮಾನವಿದೆ. ಯಾವುದೇ ಸಂದರ್ಭದಲ್ಲಿ ಪರಿಣಾಮಕಾರಿ ನಿವೃತ್ತಿ ನನ್ನ ನಿಯತಿಯೆಂದು ತೋರುತ್ತಿಲ್ಲ. ನಾನು ಪ್ರತಿಕೂಲ ಸನ್ನಿವೇಶಗಳನ್ನು ಕರಗತ ಮಾಡಿಕೊಳ್ಳುವವರೆಗೆ ಅಥವಾ ಆಧ್ಯಾತ್ಮಿಕ ಮತ್ತು ಭೌತಿಕ ನಡುವಿನ ಹೋರಾಟವನ್ನು ಅಥವಾ ಇಲ್ಲಿಯವರೆಗೆ ಅದನ್ನು ಮುಂದುವರೆಸಲು ಉದ್ದೇಶಿಸಿದ್ದರಿಂದ ನಾನು ಅದನ್ನು ಮುಂದುವರೆಸುವವರೆಗೂ ಪ್ರಪಂಚದೊಂದಿಗೆ ಸಂಪರ್ಕದಲ್ಲಿರಲೇಬೇಕು. ವೈಫಲ್ಯತೆ, ತೊಂದರೆ ಮತ್ತು ಸ್ಪಷ್ಟವಾದ ಅಸಾಧ್ಯತೆಗೆ ಸಂಬಂಧಿಸಿದಂತೆ, ಅಲ್ಪಕಾಲಿಕ ಕ್ಷಣಗಳನ್ನು ಹೊರತುಪಡಿಸಿ ಅವುಗಳ ನಿರಂತರ ಸ್ವ–ಪ್ರಸ್ತುತಿಯಿಂದ ನಾನು ಹೆಚ್ಚು ಪ್ರಭಾವಿತನಾಗಿರಲು ಅವುಗಳೊಂದಿಗೆ ಬಹಳೇ ಹೆಚ್ಚು ರೂಢಿ ಮಾಡಿಕೊಂಡಿದ್ದೇನೆ.

(2)

ನಿಜವಾಗಿಯೂ ಒಂದು ವಿಶ್ವವ್ಯಾಪಿ ವಿಘಟನೆ ಹೊಂದುವ ಇಂಥ ಸಮಯಗಳಲ್ಲಿ ಎದೆಗುಂದದೆ ಇರಲಿಕ್ಕೆ ನಮಗೆ ಶಾಂತ ಹೃದಯ, ಸ್ಥಿರಗೊಂಡ ನಿರ್ಧಾರ, ಸಂಪೂರ್ಣ ಸ್ವಾರ್ಥತ್ಯಾಗ ಮತ್ತು ಆಚೆಗಿನ ಮೇಲೆ ಸತತವಾಗಿ ಸ್ಥಿರಗೊಳಿಸಿದ ಕಣ್ಣುಗಳು ಬೇಕು. ನನಗಾಗಿ, ನಾನು ಧ್ವನಿಯನ್ನು ಅನುಸರಿಸುತ್ತೇನೆ ಮತ್ತು ನನ್ನ ಎಡಕ್ಕೆ ಅಥವಾ ಬಲಕ್ಕೆ ನೋಡುವುದಿಲ್ಲ. ಫಲಿತಾಂಶವು ನನ್ನದಲ್ಲ ಮತ್ತು ಅಷ್ಟೇನೂ ಈಗ ಶ್ರಮವೂ ಇಲ್ಲ.

6 ಮೇ 1915

(3)

ಸ್ವರ್ಗವನ್ನು ಪಡೆದುಕೊಂಡಿದ್ದೇವೆ, ಅದರೆ ಭೂಮಿಯನ್ನಲ್ಲ; ಆದರೆ, ಯೋಗದ ಪೂರ್ಣತೆಯು, ವೇದದ ಸೂತ್ರದಲ್ಲಿ "ಸ್ವರ್ಗ ಮತ್ತು ಭೂಮಿ ಸಮ ಮತ್ತು ಒಂದು" ಮಾಡುವುದಾಗಿದೆ.

20 ಮೇ 1915

(4)

ಆಂತರಿಕವಾದುದೆಲ್ಲವೂ ಮಾಗಿದೆ ಅಥವಾ ಮಾಗುತ್ತಲಿದೆ, ಆದರೆ ಅಲ್ಲಿ ಒಂದು ರೀತಿಯ ಬಂಧಿಸಿದ ಹೋರಾಟವಿದೆ, ಇದರಲ್ಲಿ ಎರಡೂ ಕಡೆಯವರು ಬಹಳ ಪ್ರಶಂಸನೀಯ ಮುನ್ನಡೆ ಸಾಧಿಸುವುದಿಲ್ಲ (ಯುರೋಪಿನಲ್ಲಿನ ಒಂದು ತೆರನಾದ ಕಂದಕ ಯುದ್ಧದಂತೆ), ಭೌತಿಕ ಪ್ರಪಂಚದ ಪ್ರತಿರೋಧದ ವಿರುದ್ಧ ಒತ್ತಾಯಿಸುವ ಆಧ್ಯಾತ್ಮಿಕ ಶಕ್ತಿ, ಪ್ರತಿ ಅಂಗುಲವನ್ನು ವಿವಾದಿಸುತ್ತಿರುವ ಮತ್ತು ಹೆಚ್ಚು ಕಡಿಮೆ ಪರಿಣಾಮಕಾರಿ ಪ್ರತಿದಾಳಿ ಮಾಡುತ್ತಿರುವ ಆ ಪ್ರತಿರೋಧವು.... ಮತ್ತು ಒಳಗೆ ಶಕ್ತಿ ಮತ್ತು ಆನಂದ ಇಲ್ಲದಿದ್ದರೆ ಅದೊಂದು ಕಿರುಕುಳಯುಕ್ತ ಹಾಗೂ ಅಸಹ್ಯಕರ ಕೆಲಸವಾಗುತ್ತದೆ; ಆದರೆ ಜ್ಞಾನದ ಕಣ್ಣು ಆಚೆಯದನ್ನು ನೋಡುತ್ತದೆ ಮತ್ತು ಅದೊಂದು ಸುಧೀರ್ಘ ಪ್ರಸಂಗ ಮಾತ್ರ ಎನ್ನುವುದನ್ನು ಕಾಣುತ್ತದೆ.

28 ಜುಲೈ 1915

(5)

ಈಗಷ್ಟೇ ಪ್ರಕಟಣೆಯಾದ ಆರ್ಯ ಪತ್ರಿಕೆಯ ಸಂಚಿಕೆಯಲ್ಲಿ ಮಾನವ ಐಕ್ಯತೆಯ ಆದರ್ಶದ ಮೇಲೆ ನಾನು ಲೇಖನಗಳನ್ನು ಪ್ರಾರಂಭಿಸಿದ್ದೇನೆ. ಮೊದಲಿಗೆ ನಾನು ಅತಿ ಆಳಕ್ಕೆ ಹೋಗುವುದಿಲ್ಲ ಮತ್ತು ಅತ್ಯಂತ ಜಾಗರೂಕನಾಗಿ ಮುಂದುವರೆಯಲು ಬಯಸಿದ್ದೇನೆ, ಆದರೆ ಓದುಗನ ಜಾಣ್ಮೆಯನ್ನು ನಿಧಾನವಾಗಿ ಐಕ್ಯತೆಯ ಆಳವಾದ ಅರ್ಥದೆಡೆಗೆ ನಿರ್ದೇಶಿಸುವಂತೆ – ವಿಶೇಷವಾಗಿ ಐಕ್ಯತೆಯನ್ನು ಏಕರೂಪತೆ ಮತ್ತು ಯಾಂತ್ರಿಕ ಸಹವಾಸ ಎಂದು ತಪ್ಪಾಗಿ ಅರ್ಥೈಸುವ ಕಲ್ಪನೆಯನ್ನು ವಿರೋಧಿಸುವುದಕ್ಕಾಗಿ.

(6)

ಯಾವುದೂ ವಸ್ತುಗಳ ಅಸ್ಥಿರತೆಯನ್ನು ತೊಂದರೆಗೊಳಿಸಲು ಸಾಧ್ಯವಿಲ್ಲವೆಂದು ತೋರುತ್ತದೆ ಮತ್ತು ನಮ್ಮ ಸ್ವಂತ ಬಾಹ್ಯದಲ್ಲಿ ಸಕ್ರೀಯವಾಗಿರುವ ಎಲ್ಲವೂ ಒಂದು ರೀತಿಯ ನಾವೆಯ ಹೊಯ್ದಾಟದಂತೆ ಮತ್ತು ಮಂಕಾದ ಗೊಂದಲದಿಂದ ಏನೂ ರೂಪಗೊಳ್ಳಲಿಲ್ಲ ಅಥವಾ ಕಾಂತಿಯು ಹೊರಹೊಮ್ಮಬಹುದು. ಇದು ವಿಶ್ವದ ಅಸಾಧಾರಣ ಸ್ಥಿತಿಯಾಗಿದೆ, ಹಳೆಯ ಪ್ರಪಂಚದ ಬಾಹ್ಯ ರೂಪದೊಂದಿಗೆ ಅವ್ಯವಸ್ಥೆಯ ವ್ಯಾಖ್ಯಾನವು ಮೇಲ್ಮೈಯಲ್ಲಿ ಸ್ಪಷ್ಟವಾಗಿ ಉಳಿದಿದೆ. ಆದರೆ ದೀರ್ಘ

ವಿಘಟನೆಯ ಅಥವಾ ಕೆಲವು ಹೊಸ ಜನ್ಮದ ಒಂದು ಗೊಂದಲ? ಇದು ದಿನದಿಂದ ದಿನಕ್ಕೆ ಹೋರಾಡುತ್ತಿರುವ ವಿಷಯ, ಆದರೆ ನಿರ್ಧಾರಕ್ಕೆ ಯಾವುದೆ ಮಾರ್ಗವಿಲ್ಲದೆ.

(7)

ನಿಶ್ಚಲತೆಯ ಈ ಅವಧಿಗಳು ಯಾವಾಗಲೂ ಮೇಲ್ಮೈಗಿಂತ ಕೆಳಗಿರುವ ಕೆಲಸವನ್ನು ಮರೆಮಾಡುತ್ತದೆ, ಅದು ನಂತರದಲ್ಲಿ ಸ್ವಲ್ಪ ಮುನ್ನಡೆಯನ್ನು ಉಂಟುಮಾಡುತ್ತದೆ.

(8)

ಎಲ್ಲಿ ನಿರ್ದೇಶನ ಮಾಡುವ ಧ್ವನಿ, ಯೋಚನೆ ಅಥವಾ ಆವೇಗ ಇಲ್ಲವೋ, ಪ್ರತಿಫಲನವು ಯಾವುದನ್ನೂ ಬಹಳ ದೂರದವರೆಗೆ ಒಯ್ಯಲಾರದು. ಇದು ಮನಸ್ಸನ್ನು ನಿರಂತರವಾಗಿ (ಅನಿಶ್ಚಿತ) ಸಾಧ್ಯತೆಗಳ ಸುತ್ತ ಪ್ರಯಾಣಿಸುವಂತೆ ಮಾತ್ರ ಮಾಡುತ್ತದೆ.

ಈ ವಿಷಯಗಳು ನಿಜವಾಗಿಯು ಹೊರಗಿನ ಅಂಶಗಳಿಗಿಂತ ಅತಿ ಹೆಚ್ಚು ನಮ್ಮ ಮೇಲೆಯೇ ಅವಲಂಬಿಸಿವೆ. ನಮ್ಮ ಆಲೋಚನೆಗಳಿಂದ ಮತ್ತು ಮಾನಸಿಕ ರಚನೆಗಳಿಂದ ನಾವು ತೊಂದರೆಗಳನ್ನು ಹೆಚ್ಚಿಸದಿದ್ದರೆ ಅಥವಾ ಅವು ಹೆಚ್ಚಾದಾಗ ನಾವು ಖಚಿತಪಡಿಸದಿದ್ದರೆ, ನಮ್ಮ ಆಂತರ್ಯದಲ್ಲಿ ನಿಶ್ಚಲತೆ ಹಾಗೂ ಶಾಂತಿ ಇದ್ದರೆ ಮತ್ತು ವೈರಿಯನ್ನು ಉತ್ತೇಜಿಸಿ ತನ್ನನ್ನು ತಾನು ನಮ್ಮ ಮೇಲೆ ನಮ್ಮಲ್ಲಿ ಯಾವುದು ಇಲ್ಲದಿದ್ದರೆ, ಆಗ ಬಾಹ್ಯ ಸಾಧ್ಯತೆಗಳು ಸಾಮಾನ್ಯವಾಗಿ ತಮ್ಮಷ್ಟಕ್ಕೆ ತಾವು ನನಸಾಗುವುದಿಲ್ಲ.

ಪ್ರಸ್ತುತ ನಮ್ಮ ಕೆಲಸವು, ನಮ್ಮ ಸುತ್ತಲಿನ ಪ್ರತಿಕೂಲ ಶಕ್ತಿಗಳನ್ನು ಮತ್ತು ಘಟನೆಗಳನ್ನು ಲೆಕ್ಕಿಸದೆ ಆಧ್ಯಾತ್ಮಿಕ ಶಕ್ತಿ, ಶಾಂತ ಜ್ಞಾನ ಮತ್ತು ಸಂತೋಷವನ್ನು ಸಂಗ್ರಹಿಸುವುದಾಗಿದೆ, ಇದರಿಂದ ನಮ್ಮ ಕೆಲಸವು ನಿಜವಾಗಿಯು ಪ್ರಾರಂಭವಾದಾಗ, ನಮ್ಮ ಕೆಲಸವು ಇರುವ ಪ್ರಾಪಂಚಿಕ ಜಗತ್ತಿನ ಮೇಲೆ ನಮ್ಮನ್ನು ನಾವು ಹೇರಲು ನಮಗೆ ಸಾಧ್ಯವಾಗುತ್ತದೆ. (ಇದನ್ನು [ನಾನು] ನಿಧಾನವಾಗಿ ಮಾಡುತ್ತಿದ್ದೇನೆ: ನೀವು, ಹೆಚ್ಚು ವೇಗವಾಗಿ ಎಂದು ಭಾವಿಸುತ್ತೇನೆ.)

ಆಂತರಿಕವು ಬಾಹ್ಯಕ್ಕಿಂತ ಮೊದಲಿರಬೇಕೆಂದು ನನ್ನ ಅಭಿಪ್ರಾಯ, ಇಲ್ಲದಿದ್ದರೆ, ನಮ್ಮ ಆಂತರಿಕ ಶಕ್ತಿ ಮತ್ತು ಜ್ಞಾನವನ್ನು ಮೀರಿ ನಾವು ಪ್ರಯತ್ನಿಸುವ ಯಾವುದೇ ಕೆಲಸವು ವಿಫಲಗೊಳ್ಳುವ ಅಥವಾ ವಡಕಾಗುವ ಸಾಧ್ಯತೆಯಿದೆ.

ಶಕ್ತಿಗಳ ಮತ್ತು ಸಾಧ್ಯತೆಗಳ ವೃತ್ತದಿಂದ ಹೊರಬಂದು, ಸತ್ಯದ, ವಿಜ್ಞಾನದ ಬೆಳಕಿನಲ್ಲಿ ಸೇರುವುದು ನನ್ನ ಪ್ರಸ್ತುತ ಹೋರಾಟವಾಗಿದೆ.

ಅಬ್ದುಲ್ ಬಹಾ ಅವರ ಪೂರ್ವ ವೀಕ್ಷಣೆ ಬಹುಶಃ ಸರಿಯಾಗಿದೆ, ಆದರೆ ಸದ್ಯಕ್ಕೆ ಇದು ತುಂಬಾ ಕಠಿಣವಾದ ರೂಪದಲ್ಲಿ ಇಡಲ್ಪಟ್ಟಿದೆ ಎಂದು ತೋರುತ್ತದೆ. ಬೆಳಕಿನ ಒಂದು ಕೇಂದ್ರ, ಒಂದು ಭೌತಿಕ ಗುಂಪಿನ ನಿಯಮಗಳಿಗೆ ಅನಿವಾರ್ಯವಾಗಿ ರೂಪಾಂತರಿಸಬೇಕಾಗಿಲ್ಲ, ಆದರೆ ಇದರಲ್ಲಿ ಕೆಲವರು ನಿಲ್ಲಬಹುದು, ಒಂದು ವರ್ಧಿಸುವ ಪ್ರಕಾಶಮಾನವಾದ ವೃತ್ತವನ್ನು ಹೆಚ್ಚು–ಹೆಚ್ಚಾಗಿ ಪ್ರವೇಶಿಸಬಹುದು, ಇದೊಂದು ಅನಿವಾರ್ಯ ಮಾರ್ಗವೆಂದು ತೋರುತ್ತದೆ.

(9)

ನಾವು ಬೆಳಕಿನಲ್ಲಿರುವುದಕ್ಕಿಂತಲೂ ಬೆಳಕಿನ ಪ್ರತಿಫಲನದಲ್ಲಿ ಇನ್ನೂ ಹೆಚ್ಚು ಜೀವಿಸುತ್ತೇವೆ, ಮತ್ತು ನಾವು ಕೇಂದ್ರಕ್ಕೆ ಹತ್ತಿರವಾಗಿವವರೆಗೆ ನಮಗೆ ಗೊತ್ತಾಗುವುದಿಲ್ಲ.

(10)

ನನ್ನನ್ನು ಕಳುಹಿಸಿದ ಯೋಜನೆಯು ಬಹುಮಟ್ಟಿಗೆ ಪರಿಸರದ ಪ್ರಭಾವದಿಂದ ರೂಪುಗೊಂಡ ಒಂದು ಮಾನಸಿಕ ನಿರ್ಮಾಣವೆಂದು ನನಗೆ ತೋರುತ್ತದೆ. ಇದನ್ನು ಕಾರ್ಯರೂಪಕ್ಕೆ ತರಬಹುದೆಂದು ಭಾವಿಸುವುದಿಲ್ಲ; ಯಾಕೆಂದರೆ ಜಗತ್ತು ಸಿದ್ಧವಾಗಿಲ್ಲ ಮತ್ತು ಅಂತಹ ಯಾವುದನ್ನಾದರು ಪ್ರಯತ್ನಿಸಿದರೆ ಅದನ್ನು ನಿಷ್ಠೆಯಿಂದ ಪ್ರಾರಂಭಿಸಲಾಗುವುದಿಲ್ಲ ಅಥವಾ ನಿಷ್ಠೆಯಿಂದ ಕಾರ್ಯಗತ–ಗೊಳಿಸಲಾಗುವುದಿಲ್ಲ... ನಾವು ಯೋಜಿಸಿದ ಅಂತಹ ಯಾವುದೇ ಯೋಜನೆಯು ಶ್ರೇಷ್ಠ ತುದಿಗಳನ್ನು ಉಪಕರಿಸುವ ಮೊದಲು ಮಾನವ ಕುಲದ ಹೃದಯದಲ್ಲಿ ಒಂದು ಬದಲಾವಣೆಯ, ಒಂದು ಹೊಸ ಹೃದಯದ ಅವಶ್ಯಕತೆ ಇದೆ. ಯಾವುದೇ ಅಕಾಲಿಕ ರಚನೆಗಾಗಿ ನಾನು ಒಂದು ಸಾಮಾನ್ಯ ಬೇರ್ಪಡಿಸುವಿಕೆಯನ್ನು ಬೆಂಬಲಿಸುತ್ತೇನೆ, ಈ ವಿಸರ್ಜನೆಯು ಎಷ್ಟೇ ಹಾನಿಕಾರಕವಾಗಿದ್ದರೂ.

18 ನವೆಂಬರ್, 1915

(11)

ಮನಸ್ಸಿನ ಮತ್ತು ಹೃದಯದ ಒಂದು ಸಂಪೂರ್ಣ ಸಮಾನತೆ ಮತ್ತು ಎಲ್ಲ ಜೀವ ಸದಸ್ಯರುಗಳಲ್ಲಿ ಸ್ಪಷ್ಟ ನಿರ್ಮಲತೆ ಹಾಗೂ ಶಾಂತ ಸತ್ವವು ಬಹಳ ಹಿಂದಿನಿಂದಿಲೂ ಇರುವ ಪ್ರಾಥಮಿಕ ನಿಯಮದ ಮೇಲೆ ನನ್ನಲ್ಲಿ ಕೆಲಸ ಮಾಡುವ ಶಕ್ತಿಯ ಅಕ್ಷಯ ತಾಳ್ಮೆಯೊಂದಿಗೆ ಒತ್ತಾಯಿಸಿದೆ ಮತ್ತು ಇಚ್ಛಾ ಶಕ್ತಿಯ ಅನಿವಾರ್ಯಯೊಂದಿಗೆ ಈ ಮೊದಲು ಅವಶ್ಯಕತೆಗಳ ನಿರ್ಲಕ್ಷ್ಯಕ್ಕೆ ಮುಂದಾಗಲು ಇತರ ಶಕ್ತಿಗಳ ಎಲ್ಲ ಪ್ರಯತ್ನಗಳನ್ನು ತಿರಸ್ಕರಿಸುತ್ತದೆ. ಅವರು ದುರ್ಬಲ–ಗೊಂಡಲೆಲ್ಲಾ ಅದು ಅವರ ಮೇಲೆ ಮರಳುತ್ತದೆ ಮತ್ತು ಅವನ ಕೆಲಸದ ತಪ್ಪುಗಳನ್ನು ತಾಳ್ಮೆಯಿಂದ ತಿದ್ದುತ್ತಿರುವ ಒಬ್ಬ ಕೆಲಸಗಾರನಂತೆ ದುರ್ಬಲ ಅಂಶಗಳ ಮೇಲೆ ಮತ್ತೆ ಮತ್ತೆ ಕೆಲಸ ಮಾಡುತ್ತದೆ. ಇವುಗಳು ಉಳಿದೆಲ್ಲದರ ಅಡಿಪಾಯ ಹಾಗೂ ನಿಯಮವೆಂದು ನನಗೆ ತೋರುತ್ತದೆ. ಅವುಗಳು ಗಟ್ಟಿಯಾದಂತೆ ಮತ್ತು ಹೆಚ್ಚು ಪೂರ್ಣವಾದಂತೆ, ವ್ಯವಸ್ಥೆಯು, ಎಲ್ಲ ವಿಷಯಗಳಲ್ಲಿ ಹಾಗೂ ಜೀವಗಳಲ್ಲಿ, ಎಲ್ಲ ಗುಣಗಳಲ್ಲಿ, ಶಕ್ತಿಗಳಲ್ಲಿ, ಘಟನೆಗಳಲ್ಲಿ, ಈ ಎಲ್ಲ ವಿಶ್ವ ಪ್ರಜ್ಞೆಯಲ್ಲಿ ಮತ್ತು ಅದರ ಕಾರ್ಯಗಳ ಆಟಗಳಲ್ಲಿ "ಒಂದೇ" ಎಂದು ಸ್ಥಾಪಿತವಾದ ಗ್ರಹಿಕೆಯನ್ನು ಹೆಚ್ಚು ಸತತವಾಗಿ ಹಾಗೂ ಸ್ಫುಟವಾಗಿ ಹಿಡಿದಿಡಲು ಸಾಧ್ಯವಾಗುತ್ತದೆ. ಅದು ಏಕತೆಯನ್ನು ಮತ್ತು ಅದರ ಮೇಲೆ ಆಳವಾದ ತೃಪ್ತಿ ಹಾಗೂ ಹೆಚ್ಚುತ್ತಿರುವ ಏಕತೆಯ ಆನಂದವನ್ನು ಕಂಡುಕೊಳ್ಳುತ್ತದೆ. ಇದಕ್ಕಾಗಿಯೆ ನಮ್ಮ ಸ್ವಭಾವವು ಹೆಚ್ಚು ಅವಿಧೇಯವಾಗುತ್ತದೆ. ಇದು ವಿಭಜನೆಯಲ್ಲಿ, ದ್ವಂದ್ವತೆಯಲ್ಲಿ, ದುಃಖದಲ್ಲಿ ಹಾಗೂ ಅತೃಪ್ತ ಉತ್ಸಾಹದಲ್ಲಿ ಮತ್ತು ಶ್ರಮದಲ್ಲಿ ಧೃಢವಾಗಿರುತ್ತದೆ, ದೈವೀ ವ್ಯಾಪಕತೆಗೆ, ಸಂತೋಷ ಹಾಗೂ ಸಮತೂಕತೆಗೆ ತನ್ನನ್ನು ತಾನು ಒಗ್ಗಿಸಿಕೊಳ್ಳುವುದು ಕಷ್ಟವೆಂದು ಅದು ಕಂಡುಕೊಳ್ಳುತ್ತದೆ – ವಿಶೇಶವಾಗಿ ನಮ್ಮ ಸ್ವಭಾವದ ಪ್ರಾಣಿಕ ಹಾಗೂ ವಿಷಯಿಕ ಭಾಗಗಳು; ಅವರು ಒಪ್ಪಿಕೊಂಡ ಮತ್ತು ಅದು ಸಂತೋಷ ಮತ್ತು ಶಾಂತಿ ಮತ್ತು ಏಕತೆಯಲ್ಲಿ ದೀರ್ಘಕಾಲ ಬದುಕಿದ್ದರೂ ಸಹ ಮನಸ್ಸನ್ನು ಕೆಳಕ್ಕೆ ಎಳೆಯುತ್ತಾರೆ. ಅದಕ್ಕಾಗಿಯೆ ಧರ್ಮಗಳು ಮತ್ತು ತತ್ವ ಚಿಂತನೆಗಳು ಯಾಕೆ ಜೀವ ಮತ್ತು ಜಗತ್ತುಗಳನ್ನು ಖಂಡಿಸುವುದಕ್ಕೆ ಒಲವು ತೋರಿವೆ ಮತ್ತು ವಿಜಯದ ಬದಲು ತಪ್ಪಿಸಿಕೊಳ್ಳುವ ಗುರಿಯನ್ನು ಹೊಂದಿವೆ ಎಂದು ನಾನು ಭಾವಿಸುತ್ತೇನೆ. ಆದರೆ ಗೆಲುವು

ಗೆಲ್ಲಲೇಬೇಕು; ಬಂಡಾಯದ ಅಂಶಗಳನ್ನು ಪುನಃ ಪಡೆದುಕೊಳ್ಳಬೇಕು ಮತ್ತು ಪರಿವರ್ತಿಸಬೇಕು, ತಿರಸ್ಕರಿಸಲಾಗುವುದಿಲ್ಲ ಅಥವಾ ಹೊರ ಹಾಕಲಾಗುವುದಿಲ್ಲ.

ಏಕತೆಯು ಉತ್ತಮವಾಗಿ ಸ್ಥಾಪನೆಯಾದಾಗ, ನಮ್ಮ ಕೆಲಸದ ಸ್ಥಾಯಿ ಅರ್ಧದಷ್ಟು ಮಾಡಿದಂತೆ, ಆದರೆ ಸಕ್ರೀಯ ಅರ್ಧ ಉಳಿಯುತ್ತದೆ. ಅದಾದ ಮೇಲೆ ನಾವು ಆ "ಏಕ"ದಲ್ಲಿ ಒಡೆಯನನ್ನು ಮತ್ತು ಅವನ ಶಕ್ತಿಯನ್ನು ನೋಡಬೇಕು, – ನಮ್ಮ ಭಾರತೀಯ ಧರ್ಮಗಳ ಪದಗಳನ್ನು ಬಳಸಿಕೊಂಡು ಕೃಷ್ಣ ಹಾಗೂ ಕಾಳಿ ಎಂದು ಅವರನ್ನು ನಾನು ಹೆಸರಿಸುತ್ತೇನೆ; ನನ್ನ ಮತ್ತು ನನ್ನ ಸ್ವಭಾವವನ್ನು ಆಕ್ರಮಿಸಿಕೊಳ್ಳುವ ಶಕ್ತಿಯು ಕಾಳಿಯಾಗುತ್ತಾಳೆ ಮತ್ತು ಬೇರೆ ಯಾವುದು ಆಗುವುದಿಲ್ಲ, ಯಜಮಾನನು ಶಕ್ತಿಯನ್ನು ನಿರ್ದೇಶಿಸುತ್ತ, ಆನಂದಿಸುತ್ತ ತನ್ನ ಮಿತಿಗಳಿಗೆ ಬಳಸಿಕೊಳ್ಳುತ್ತ, ನನ್ನ ಮಿತಿಗಳಿಗೆ ಅಲ್ಲ, ಅದರೊಂದಿಗೆ ನನ್ನನ್ನು ನಾನು ವಿಶ್ವವ್ಯಾಪಿ ಅಸ್ತಿತ್ವದ ಕೇಂದ್ರವೆಂದು ಮಾತ್ರ ಕರೆದುಕೊಳ್ಳುತ್ತೇನೆ ಮತ್ತು "ಆತ್ಮಕ್ಕೆ" ಆತ್ಮವಾಗಿ ಪ್ರತಿಕ್ರಿಯಿಸುತ್ತೇನೆ, ಕೃಷ್ಣ ಮತ್ತು ಕಾಳಿ ಹೊರತುಪಡಿಸಿ ಏನೂ ಉಳಿಯದ ತನ್ನ ಚಿತ್ರಣವನ್ನು ತಾನೇ ತೆಗೆದುಕೊಳ್ಳುತ್ತಾನೆ. ಎಲ್ಲಾ ಹಿನ್ನಡೆ ಮತ್ತು ಹಿಮ್ಮೆಟ್ಟುವಿಕೆಯ ನಡುವೆಯೂ ನಾನು ತಲುಪಿದ ಹಂತ ಇದು, ವಾಸ್ತವವಾಗಿ ಸುರಕ್ಷತೆಯಲ್ಲಿ ಮತ್ತು ತೀವ್ರತೆಯಲ್ಲಿ ಅಪೂರ್ಣವಾಗಿ, ಆದರೆ ಸಾಮಾನ್ಯ ಪ್ರಕಾರದಲ್ಲಿ ಸಾಕಷ್ಟು. ಅದು ಪೂರ್ಣಗೊಂಡಾಗ, ಆತನ ದೈವಿಕ ಶಕ್ತಿಯ ಕ್ರಿಯೆಯನ್ನು ನಿಯಂತ್ರಿಸುವ ಅವನ ದೈವಿಕ ಜ್ಞಾನದ ನಾಟಕವನ್ನು ಸುರಕ್ಷಿತವಾಗಿ ನಮ್ಮಲ್ಲಿ ಕಾಣಬಹುದು ಎಂದು ನಾವು ಭಾವಿಸಬಹುದು. ಉಳಿದವು ಅವನ ವಿಶ್ವ ಆಟದ ವಿಭಿನ್ನ ಸ್ಥರಗಳ ಪೂರ್ಣ ತೆರೆಯುವಿಕೆ ಮತ್ತು ದೇಹ ಹಾಗೂ ಭೌತವಸ್ತು ಮತ್ತು ಲೌಕಿಕ ಜಗತ್ತನ್ನು ಸತ್ಯದ ಉನ್ನತ ಸ್ವರ್ಗದ ಕಾನೂನಿಗೆ ಅಧೀನಗೊಳಿಸುವುದು. ನನ್ನ ಹಿಂದಿನ ಅಜ್ಞಾನದಲ್ಲಿ ನಾನು ಮೊದಲು ಷರತ್ತುಗಳನ್ನು ಪೂರೈಸುವ ಮೊದಲು ಈ ವಿಷಯಗಳಿಗೆ ಅಸಹನೆಯಿಂದ ಮುಂದಕ್ಕೆ ಒತ್ತುತ್ತಿದ್ದೆ. ಆದಾಗ್ಯೂ, ಪ್ರಯತ್ನವು ಅಗತ್ಯವಾಗಿತ್ತು ಮತ್ತು ವಿಷಯಿಕ ಉಪಕರಣಗಳ ಅಗತ್ಯತೆಯ ಅರಿಕೆಯನ್ನು ಮಾಡಿತು – ನಂತರದ ಸಂಭವನೀಯತೆಯ ಸಂಗತಿಯಾಗಿ ನಾನು ಈಗ ಇನ್ನೂ ಮುನ್ನೋಟವನ್ನು ಮಾತ್ರ ಎದುರು ನೋಡಬಹುದು.

ಅತಿಮಾನಸ ಜೀವಿಯ ಬೆಳಕು ಮತ್ತು ಬಲವನ್ನು ಸುರಕ್ಷಿತವಾಗಿ ಹೊಂದಲು, ಸಾಮರ್ಥ್ಯವು ಈ ಮುಖ್ಯ ಉದ್ದೇಶದೆಡೆಗೆ ಹೊರಳುತ್ತಿದೆ. ಆದರೆ, ಬೌದ್ಧಿಕ ಚಿಂತನೆಯ ಮತ್ತು ಮಾನಸಿಕ ಬಯಕೆಯ ಅಭ್ಯಾಸಗಳ ಅವಶೇಷಗಳು ತಮ್ಮ ಧೃಢ ನಿಶ್ಚಯದಲ್ಲಿ ಎಷ್ಟು ಹಠಮಾರಿ ಆಗುತ್ತವೆ ಎಂದರೆ, ಅವು ಪ್ರಗತಿಗೆ ಅಡ್ಡಿಯುಂಟು ಮಾಡುತ್ತವೆ, ಆಗಲೇ ಸಾಧಿಸಲಾದ ಸಣ್ಣ ಸಾಧನೆಯಿಂದ ಅನಿಶ್ಚಿತ ಮತ್ತು ಯಾವಾಗಲೂ ಹಿಂದೆ ಬೀಳುತ್ತದೆ. ಅವರು ಇನ್ನು ಮುಂದೆ ನನ್ನೊಳಗೆ ಇಲ್ಲ, ಅವರು ತಮ್ಮ ಅಸಮರ್ಥತೆಯನ್ನು ಗ್ರಹಿಸಿದಾಗಲೂ ಅವರು ಕುರುಡರು, ಯಾಂತ್ರಿಕರು, ತಿದ್ದಲಾರದಷ್ಟು ಹಾಳಗಿರುವವರು, ಆದರೆ ಅವರು ಮನಸ್ಸನ್ನು ಸುತ್ತುವರೆದಿರುತ್ತಾರೆ ಮತ್ತು ಅತಿಮಾನಸ ಬೆಳಕು ಮತ್ತು ಉನ್ನತ ಆಜ್ಞೆಗೆ ಮಾತ್ರ ಮುಕ್ತವಾಗಿರಲು ಅದು ಪ್ರಯತ್ನಿಸಿದಾಗಲೆಲ್ಲ ಅವರು ಸಲಹೆಗಳ ಮಳೆಗರೆಯುತ್ತಾರೆ, ಅದರಿಂದ ಜ್ಞಾನ ಮತ್ತು ಇಚ್ಛಾಶಕ್ತಿಯು ಗೊಂದಲಮಯ, ವಿಕೃತ ಮತ್ತು ಆಗಾಗ್ಗೆ ತಪ್ಪುದಾರಿಗೆಳೆಯುವ ರೂಪದಲ್ಲಿ ಮನಸ್ಸನ್ನು ತಲುಪುತ್ತದೆ. ಆದಾಗ್ಯೂ, ಇದು ಕೇವಲ ಸಮಯದ ಪ್ರಶ್ನೆಯಾಗಿದೆ: ಆಕ್ರಮಣವು ಬಲದಲ್ಲಿ ಕ್ಷೀಣಿಸುತ್ತದೆ ಮತ್ತು ಅಂತಿಮವಾಗಿ ಹೊರಹಾಕಲ್ಪಡುತ್ತದೆ.

(12)

ನೀವು ವಿವರಿಸಿದ ಅನುಭವವು ನೈಜ ಅರ್ಥದಲ್ಲಿ ವೈದಿಕವಾಗಿದೆ, ಆದರೂ ಇದು ತಮ್ಮನ್ನು ತಾವು [ವೈದಿಕರೆಂದು] ಕರೆದುಕೊಳ್ಳುವ ಆಧುನಿಕ ಯೋಗದ ವ್ಯವಸ್ಥೆಗಳಿಂದ ಸುಲಭವಾಗಿ ಗುರುತುಸಲ್ಪಡುವುದಿಲ್ಲ. ಇದು ದೈವಿಕತತ್ವದೊಂದಿಗೆ ವೇದ ಮತ್ತು ಪುರಾಣಗಳ ಭೂಮಿಯ ಮಿಲನವಾಗಿದೆ, ನಮ್ಮ ಭೂಮಿಯ ಮೇಲಿರುವ ಎಂದು ಹೇಳಲಾದ ಭೂಮಿಯು, ಅಂದರೆ, ಈ ಪ್ರಪಂಚದ ಭೌತಿಕ ಜೀವಿ ಹಾಗೂ ಪ್ರಜ್ಞೆ ಮತ್ತು ದೇಹವು ಕೇವಲ ಪ್ರತಿಕೃತಿಗಳು. ಆದರೆ ಆಧುನಿಕ ಯೋಗಗಳು ದೈವದೊಂದಿಗೆ ಭೌತಿಕ ಮಿಲನದ ಸಾಧ್ಯತೆಯನ್ನು ಕಠಿಣವಾಗಿ (ಪ್ರಯಾಸದಿಂದ) ಗುರುತಿಸುತ್ತವೆ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 6/285–289 – ಶ್ರೀ ಅರವಿಂದರು**

1. ಸಂಪೂರ್ಣ ಪ್ರಜ್ಞೆಯು ದೈವಿಕ ಚಿಂತನೆಯಲ್ಲಿ ಮುಳುಗಿದೆ, ಇಡೀ ಅಸ್ತಿತ್ವವು ಒಂದು ಸರ್ವೋಚ್ಚ ಮತ್ತು ವಿಶಾಲವಾದ ಉತ್ಸಾಹವನ್ನು ಅನುಭವಿಸಿತು.

ನಂತರ ಭೌತಿಕ ದೇಹವನ್ನು ವಶಪಡಿಸಿಕೊಳ್ಳಲಾಯಿತು, ಮೊದಲು ಅದರ ಕೆಳ ಭಾಗಗಳಲ್ಲಿ ಮತ್ತು ಅದರ ನಂತರ ಇಡೀ, ಪವಿತ್ರ ನಡುಕದಿಂದ ಎಲ್ಲಾ ವೈಯಕ್ತಿಕ ಮಿತಿಗಳನ್ನು ಸ್ವಲ್ಪಮಟ್ಟಿಗೆ ಭೌತಿಕ ಸಂವೇದನೆಯಲ್ಲಿ ಸ್ವಲ್ಪ–ಸ್ವಲ್ಪವೆ ಬೀಳುವಂತೆ ಮಾಡಿತು. ಜೀವಿಯು, ಕ್ರಮಬದ್ಧವಾಗಿ, ಪ್ರತಿ ಬೇಲಿಗಳನ್ನು ಮುರಿಯುತ್ತ, ಎಲ್ಲ ಅಡೆತಡೆಗಳನ್ನು ನಾಶ ಮಾಡುತ್ತ ತನ್ನ ಹಿರಿಮೆಯಲ್ಲಿ ಹಂತಹಂತವಾಗಿ ಬೆಳೆಯಿತು, ಅಗಾಧತೆಯಲ್ಲಿ ಹಾಗೂ ತೀವ್ರತೆಯಲ್ಲಿ ನಿರಂತರವಾಗಿ ಹೆಚ್ಚಾದಂತಹ ಒಂದು ಬಲ ಹಾಗೂ ಶಕ್ತಿಯನ್ನು ಒಳಗೊಂಡಿರಬಹುದು ಮತ್ತು ವ್ಯಕ್ತಮಾಡಬಹುದು. ಭೂಮಿಯೊಂದಿಗೆ ಸಂಪೂರ್ಣ ಗುರುತಿಸುವಿಕೆಯಾಗುವವರೆಗೂ ಇದು ಕೋಶಗಳ ಪ್ರಗತಿಶೀಲ ಹಿಗ್ಗುವಿಕೆಯಾಗಿತ್ತು: ಜಾಗೃತ ಪ್ರಜ್ಞೆಯ ದೇಹವು ಸ್ವರ್ಗೀಯ ಆಕಾಶದಲ್ಲಿ ಸಾಮರಸ್ಯದಿಂದ ಚಲಿಸುತ್ತಿರುವ ಭೂಮಂಡಲದ ಪ್ರಪಂಚವಾಗಿತ್ತು. ಪ್ರಜ್ಞೆಗೆ ತನ್ನ ಜಾಗತಿಕ ದೇಹವು ಸಾರ್ವತ್ರಿಕ ಜೀವಿಯ ತೋಳುಗಳಲ್ಲಿ ಚಲಿಸುತ್ತಿದೆ ಎಂದು ತಿಳಿದಿತ್ತು, ಮತ್ತು ಅದು ತನ್ನನ್ನು ತಾನು ಕೊಟ್ಟಿತ್ತು, ಅದು ಶಾಂತಿಯುತ ಆನಂದದ ಭಾವಪರವಶತೆಯಲ್ಲಿ ತನ್ನನ್ನು ತಾನೇ ತ್ಯಜಿಸಿತು. ಆಗ, ಅದರ ದೇಹವು ಬ್ರಹ್ಮಾಂಡದ ದೇಹದಲ್ಲಿ ಹೀರಲ್ಪಟ್ಟಿತು ಮತ್ತು ಅದರೊಂದಿಗೆ ಒಂದಾಯಿತೆಂದು ಭಾವಿಸಿತು; ಪ್ರಜ್ಞೆಯು ಅದರ ಅಚಲ ಪೂರ್ಣತೆಯಲ್ಲಿ, ತನ್ನ ಆಂತರಿಕ ಸಂಕೀರ್ಣತೆಯಲ್ಲಿ ಚಲಿಸುತ್ತ ಬ್ರಹ್ಮಾಂಡದ ಪ್ರಜ್ಞೆಯಾಯಿತು. ಬ್ರಹ್ಮಾಂಡದ ಪ್ರಜ್ಞೆಯು ದಿವ್ಯತೆಯ ಕಡೆಗೆ ಉತ್ಸಾಹಭರಿತ ಆಕಾಂಕ್ಷೆಯಲ್ಲಿ ಚಿಮ್ಮಿತು, ಒಂದು ಪರಿಪೂರ್ಣ ಶರಣಾಗತಿ, ಮತ್ತು ಅದು ಪರಿಶುದ್ಧವಾದ ಬೆಳಕಿನ ವೈಭವದಲ್ಲಿ ಬ್ರಹ್ಮಾಂಡದ ಸುತ್ತ ಅನಂತವಾಗಿ ಸುರುಳಿಯಾದ ದೇಹದ ಅನೇಕ ತಲೆಯ ಸರ್ಪದ ಮೇಲೆ ನಿಂತಿದ್ದ ಪ್ರಕಾಶಮಾನವಾದ ಜೀವಿಯನ್ನು ಅದು ನೋಡಿತು. ಜೀವಿಯು, ವಿಜಯದ ಶಾಶ್ವತ ಸಂಜ್ಞೆಯಲ್ಲಿ ಒಂದು ಕಡೆ ಸರ್ಪವನ್ನು ಜಯಿಸಿದ ಮತ್ತು ಅದೇ ಸಮಯದಲ್ಲಿ ಮತ್ತು ಅವನಿಂದ ನೀಡಲ್ಪಟ್ಟ ವಿಶ್ವವನ್ನು ಸೃಷ್ಟಿಸಿದ. ಸರ್ಪದ ಮೇಲೆ ನೇರವಾಗಿ ಅವನು ತನ್ನ ಎಲ್ಲ ಗೆಲುವಿನ ಪೂರ್ಣ ಸಾಮರ್ಥ್ಯದಿಂದ ಅದನ್ನು ನಿಯಂತ್ರಿಸಿದ, ಮತ್ತು ವಿಶ್ವವನ್ನು ಆವರಿಸಿದ

ಸಹಸ್ರ ಫಣಿಯನ್ನು ನುಚ್ಚುನೂರು ಮಾಡಿದ ಅದೇ ಸಂಜ್ಞೆಯು ಶಾಶ್ವತ ಜನ್ಮ ನೀಡಿತು. ನಂತರ ಪ್ರಜ್ಞೆಯು ಈ ಜೀವಿಯಾಯಿತು ಮತ್ತು ಅದರ ರೂಪವು ಮತ್ತೊಮ್ಮೆ ಬದಲಾಗುತ್ತಿದೆ ಎಂದು ಗ್ರಹಿಸಿತು; ಇನ್ನು ಮುಂದೆ ರೂಪವೇ ಇರದ ಏನೋ ಒಂದರಲ್ಲಿ ಅದು ಸೆಳೆಯಲ್ಪಟ್ಟಿತು ಮತ್ತು ಅದಾಗ್ಯೂ ಎಲ್ಲ ರೂಪಗಳನ್ನು ಒಳಗೊಂಡಿತ್ತು, ಏನೋ ಒಂದು ಬದಲಾಗದ, ನೋಡುತ್ತದೆ, – ಕಣ್ಣು, ಪ್ರೇಕ್ಷಕ. ಮತ್ತು ಅದು ಏನು ನೋಡುತ್ತದೆ, ಅದಾಗಿದೆ. ನಂತರ ಈ ರೂಪದ ಕೊನೆಯ ಕುರುಹು ಕಣ್ಮರೆಯಾಯಿತು ಮತ್ತು ಸ್ವತಃ ಪ್ರಜ್ಞೆಯು ಅನಿರ್ವಚನೀಯವಾದುದರಲ್ಲಿ ಹಾಗೂ ಅವರ್ಣನೀಯವಾದುದರಲ್ಲಿ ಲೀನವಾಯಿತು.

ವೈಯಕ್ತಿಕ ದೇಹದ ಪ್ರಜ್ಞೆಯ ಕಡೆಗೆ ಮರಳುವಿಕೆಯು ಸ್ಥಿರವಾದ ಹಾಗೂ ಬದಲಾಯಿಸದ ಬೆಳಕಿನ ಮತ್ತು ಸಾಮರ್ಥ್ಯದ ಮತ್ತು ಲಾಲಿತ್ಯದ ಮತ್ತು ಉಪಾಸನೆಯ ವೈಭವದಲ್ಲಿ ನಿಧಾನವಾಗಿ ನಡೆಯಿತು, ಆದರೆ ನೇರವಾಗಿ, ವಿಶ್ವವ್ಯಾಪಿ ಮತ್ತು ಭೂಮಂಡಲದ ಸ್ವರೂಪಗಳ ಮೂಲಕ ಮತ್ತೆ ಹಾದುಹೋಗದೆ. ಮತ್ತು ಅದು ಸಾಧಾರಣ ದೈಹಿಕ ರೂಪವು ಯಾವುದೇ ಮಧ್ಯಸ್ಥಿಕೆಯಿಲ್ಲದೆ, ಸರ್ವೋಚ್ಚ ಮತ್ತು ಶಾಶ್ವತ ಸಾಕ್ಷಿಯ ನೇರ ಮತ್ತು ತಕ್ಷಣದ ಉಡುಪಾಗಿ ಮಾರ್ಪಟ್ಟಿದೆ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 1/311–12 – ಶ್ರೀಮಾತೆ**

# ಶ್ರೀ ಅರವಿಂದರು – ಶತಮಾನದ ನೋಟ

– ಶ್ರೀ ನವನೀತ ರಾಮಚಂದ್ರರಾಯರು

**ಭಾಗ 3**

ಪ್ರಥಮ ದರ್ಶನದಲ್ಲಿಯೇ ತಾವು ತಮಗಾದ ಹಲವು ದೃಷ್ಟಾಂತಗಳಲ್ಲಿ ಕಾಣುತ್ತಿದ್ದ ದೈವೀ ವ್ಯಕ್ತಿಯೇ ಇವರೆಂದು ಗುರುತಿಸಿದರು. "ಈ ಮಹಾಪುರುಷನನ್ನು ನಿನ್ನೆ ನೋಡಿದೆ; ಈತ ಈ ಪೃಥ್ವಿಯ ಮೇಲಿರುವಾಗ ಜಗತ್ತಿಗಿನ್ನು ಭಯವಿಲ್ಲ" ಎಂದು ತಮ್ಮ ಆಧ್ಯಾತ್ಮಿಕ 'ಪ್ರಾರ್ಥನೆ–ಚಿಂತನ'ಗಳ ಪುಸ್ತಕದಲ್ಲಿ ಸಾರಿರುವರು. ಈ ಇಬ್ಬರು ದಿವ್ಯ ವಿಭೂತಿಗಳ ಭೆಟ್ಟಿ ವಿಧಾತನ ಸಂಕಲ್ಪದಂತೆಯೆ ನಡೆಯಿತೆಂಬುದರಲ್ಲಿ ಸಂದೇಹವಿಲ್ಲ. ಶ್ರೀಮಾತೆಯವರ ಹಾಗೂ ಅವರ (ಅದೇ ಆಧ್ಯಾತ್ಮಿಕ ವರ್ಚಸ್ಸುಳ್ಳ) ಪತಿ ಪಾಲ್ ರಿಚರ್ಡರ ಸಹಕಾರದಿಂದ 'Arya' (ಆರ್ಯ) ಎಂಬ ತತ್ತ್ವಜ್ಞಾನಕ್ಕೆ ಮೀಸಲಾದ ಆಂಗ್ಲ ಮಾಸಪತ್ರಿಕೆ ಅದೇ ವರ್ಷದ ಆಗಸ್ಟ್ 15ರಂದು ಹೊರಬಿದ್ದಿತು. ಆ ಪ್ರಥಮ ಸಂಚಿಕೆಯಲ್ಲಿ ಅದರ ಭವ್ಯೋದ್ದೇಶಗಳು ವಿವರಿಸಲ್ಪಟ್ಟಿವೆ; 'ಜೀವನದ ಅತಿ ಮಹತ್ವದ ಸಮಸ್ಯೆಗಳ ಶಾಸ್ತ್ರಶುದ್ಧ ಅಧ್ಯಯನ, ಮಾನವ ಕುಲದ ವಿವಿಧ ಧಾರ್ಮಿಕ ಪರಂಪರೆಗಳನ್ನು ಸಾಮರಸ್ಯದ ಸೂತ್ರದಲ್ಲಿ ಪೋಣಿಸಿ ತೋರಿಸುವ ಲೇಖಮಾಲೆ, ವಿಶ್ವದಲ್ಲಿ ಉಪಲಬ್ಧವಿದ್ದ ಜ್ಞಾನದ ವಿಶಾಲ ಸಮನ್ವಯ' ಇತ್ಯಾದಿಯಾಗಿ ಅಲ್ಲಿ ಸೂಚಿಸಲಾಗಿದೆ. 1921ರಲ್ಲಿ 'ಆರ್ಯ'ವನ್ನು ನಿಲ್ಲಿಸುವವರೆಗೆ 7 ವರ್ಷಗಳ ಕಾಲಾವಧಿಯಲ್ಲಿ ಅದರ ಪ್ರತಿ ಸಂಚಿಕೆಯಲ್ಲಿ ವಿವಿಧ ಗಂಭೀರ ವಿಚಾರಾತ್ಮಕ – ಅತ್ಯಂತ ಗೂಢ ಮಾನಸಶಾಸ್ತ್ರೀಯ ಆಧ್ಯಾತ್ಮಿಕ ಜ್ಞಾನಪೂರಿತ ವಿಷಯಗಳನ್ನು ಕುರಿತು ಮೂಲಗ್ರಾಹೀ ಲೇಖನಗಳು ಧಾರಾವಾಹಿಯಾಗಿ, ಹೆಚ್ಚಾಗಿ ಶ್ರೀ ಅರವಿಂದರ ಲೆಕ್ಕಣಿಕೆಯಿಂದಲೆ ಹರಿದು ಬಂದುದು ಲೇಖನದ ಇತಿಹಾಸದಲ್ಲಿಯ ಒಂದು ಅದ್ಭುತವೇ ಆಗಿದೆ. ನಾಲ್ಕಾರು ಸಾವಿರ ಪುಟಗಳ ಈ ಮೂಲತತ್ತ್ವ, ವಿವೇಚಕ ಹಾಗೂ ಜಾಗತಿಕ ಪರಿಸ್ಥಿತಿಯ ಸೂಕ್ಷ್ಮ ವಿಮರ್ಶಾತ್ಮಕ ಸಾಹಿತ್ಯವು ಜಗತ್ತಿನ ಸಾಂಸ್ಕೃತಿಕ ಸಂಪತ್ತನ್ನು ಅದೆಷ್ಟೋ ಸಮೃದ್ಧಗೊಳಿಸಿದೆಯೆಂದು ಹೇಳಿದರೆ ಅತ್ಯುಕ್ತಿಯಾಗದು. "The Life Divine (ದಿವ್ಯ ಜೀವನ)," "Synthesis of Yoga (ಯೋಗ ಸಮನ್ವಯ)" ಎಂಬೀ ಉದ್ಗ್ರಂಥಗಳಲ್ಲಿ ಭಾಗವತ ಜೀವನ ದರ್ಶನ ಹಾಗೂ ಅದನ್ನು ಪಡೆಯುವ ಯೌಗಿಕ

ವಿಧಾನಗಳು; "Essays on the Gita (ಗೀತಾ ಪ್ರಬಂಧಗಳು)" ಎಂಬುದರಲ್ಲಿ ಒಂದು ಅಸಾಮಾನ್ಯ ಗೀತಾತತ್ತ್ವ ವಿವೇಚನೆ; "The Ideal of Human Unity (ಮಾನವ ಕುಲದ ಐಕ್ಯಾದರ್ಶ)" ಹಾಗೂ "The Psychology of Social Development (ಸಮಾಜ ವಿಕಾಸದ ಮನೋವಿಜ್ಞಾನ)" ಎಂಬ ಗ್ರಂಥರಾಜರುಗಳಲ್ಲಿ ಮಾನವ ಕುಲದ ಸಾಮೂಹಿಕ ರಾಜಕೀಯ–ಸಾಮಾಜಿಕಾದಿ ಸಮಸ್ಯೆಗಳ ಸೂಕ್ಷ್ಮ ಚಿಂತನ; "The Secret of the Veda (ವೇದ ರಹಸ್ಯ)" ಎಂಬಲ್ಲಿ ವೇದದಲ್ಲಿಯ ಸಾಂಕೇತಿಕ ರೂಪಕಗಳ ಅರ್ಥವಿವರಣೆ ಹಾಗೂ ಅದು ಬರೀ 'ಕರ್ಮಕಾಂಡ'ವಲ್ಲವೆಂಬುದರ ಪ್ರತಿಪಾದನೆ; "The Future Poetry (ಭವಿಷ್ಯತ್ಕಾವ್ಯ)"ದಲ್ಲಿ ಬರಲಿರುವ ಕವಿಗಳಿಗೆ ದಾರಿದೀಪವಾಗುವ ಪ್ರಗಲ್ಭ ಸೋದಾಹರಣ ಮಂಡನೆ – ಈ ಮಹಾ ಗ್ರಂಥಗಳೆಲ್ಲ 'ಆರ್ಯ'ದಲ್ಲಿ ಮೊದಲು ಧಾರಾವಾಹಿಯಾಗಿಯೆ ಬಂದವು. ಮುಂದೆ 'Savitri (ಸಾವಿತ್ರಿ)' ಮಹಾಕಾವ್ಯ, ಪ್ರಭೂತ ಯೋಗಮಾರ್ಗದರ್ಶಕ ಪತ್ರಸಾಹಿತ್ಯ, ಇನ್ನೂ ಎಷ್ಟೆಷ್ಟೋ..!

1921ರಲ್ಲಿ ಒಮ್ಮೆ ಶ್ರೀ ಅರವಿಂದರಿಗೆ ಒಬ್ಬರು ಕೇಳಿದರು – "'ಆರ್ಯ' ತನ್ನ ಚಂದಾದಾರರ ಸಂಖ್ಯಾ ಬಲದಿಂದ ಆರ್ಥಿಕವಾಗಿ ಸ್ವಾವಲಂಬಿಯಾಗಿದ್ದರೂ ಅದನ್ನೇಕೆ ನಿಲ್ಲಿಸಲಾಯಿತೆಂ"ದು, ಅದರಲ್ಲಿಯ ವಿಚಾರದ ಓಘದ ಆಳವಾದ ಅರ್ಥವನ್ನು ತಿಳಿದುಕೊಳ್ಳುವುದು ಓದುಗರಿಗೆ ಕಷ್ಟವಾಯಿತಾದುದರಿಂದ ಹಾಗೆ ಮಾಡಲಾಯಿತೆಂದು ಶ್ರೀ ಅರವಿಂದರು ಉತ್ತರಿಸಿದರು. ಇನ್ನೊಮ್ಮೆ "ಏಳು ಬೇರೆ ಬೇರೆ ವಿಷಯಗಳ ಮೇಲೆ 'ಆರ್ಯ'ದಲ್ಲಿ ಚ್ಯುತಿಯಿಲ್ಲದಂತೆ ಪ್ರತಿ ಸಂಚಿಕೆಯಲ್ಲಿಯೂ ಅದೆಂತು ಬರೆಯಲು ಶಕ್ತರಾದಿರಿ?" ಎಂದು ಬೇರೊಬ್ಬರು ಕೇಳಿದಾಗ ಅವರು "ಎಪ್ಪತ್ತು ವರ್ಷಗಳ ಅಖಂಡ ಕಾಲ ಪ್ರತಿ ತಿಂಗಳು 'ಆರ್ಯ'ದ ಏಳು ಸಂಚಿಕೆಗಳನ್ನು ಹೊರಡಿಸಿ ಬರೆದರೂ, ಮೇಲಣ ಭೂಮಿಕೆಯಿಂದ ನನಗೆ ಬಂದ ಜ್ಞಾನವನ್ನೆಲ್ಲ ಪೂರ್ತಿಯಾಗಿ ಬರೆದು ಮುಗಿಸಲಾರೆ!" ಎಂದರು. ಮುಂದೆ ತಮ್ಮ ಶಿಷ್ಯರೊಡನೆ ಸಂಭಾಷಿಸುತ್ತ ಈ ಏಳು ವರ್ಷಗಳ ಕಾಲಾವಧಿಯನ್ನು ಕುರಿತು ಅವರು ಹೇಳಿದುದೇನೆಂದರೆ, "ಒಂದು ಅಪರಂಪಾರ ಶಕ್ತಿ ತಮ್ಮ ಮೇಲೆ ಸುರಿದು ಬಂದಿತು, ಸುಪ್ರಮಾನಸ ಪಾತಳಿಗಳಿಂದ ವಿಶ್ವಚೇತನದ – ಪ್ರಚಂಡ ಶಕ್ತಿ ಪ್ರಕಾಶಗಳ ಪ್ರವಾಹ ನುಗ್ಗಿಬಂದಿತು. ಆ ಹೊತ್ತಿನಲ್ಲಿ ತಮ್ಮ ದೇಹ ಎಲ್ಲಿ ನುಚ್ಚು ನುರಿಯಾಗುವುದೋ,

ಸುಟ್ಟು ಹೋಗುವುದೋ ಎಂದೆನಿಸುತ್ತಿದ್ದಿತು…" "ಉನ್ನತ ಲೋಕಗಳಿಂದ ಆಗ ಬಂದ ಬೆಳಕಿನಲ್ಲಿ ಕಿಂಚಿತ್ತು ಮಾತ್ರ 'ಆರ್ಯ'ದ ಪುಟಗಳಲ್ಲಿ ಒಡಮೂಡಿತು." "ಸಾಧನದ ಈ ಕಠಿಣ ಮಾರ್ಗದಲ್ಲಿ ಎಂತು ಅಡಿಯಿಡುತ್ತಿದ್ದೀರಿ?" ಎಂಬ ಪ್ರಶ್ನೆಗೆ ಅವರುತ್ತರ: "ಭಗವಂತನ ಸಂತತ ಸಾನ್ನಿಧ್ಯ, ಸಂತತ ಮಾರ್ಗದರ್ಶನ."

ಈ ಚಿಕ್ಕ ಪ್ರಬಂಧದಲ್ಲಿ ಶ್ರೀ ಅರವಿಂದರ ಅತಿ ಮೂಲಗ್ರಾಹೀ ಸಾಹಿತ್ಯ ಸೃಷ್ಟಿಯ ಸ್ತರಗಳನ್ನೆಲ್ಲ ವಿಶದೀಕರಿಸುವುದು ಅಸಾಧ್ಯವಾದ ಮಾತು. ಶ್ರೀ ಅರವಿಂದರೊಂದು ಅಷ್ಟ ಕೋನೀ ರತ್ನ: ರಾಷ್ಟ್ರರ್ಷಿ, ಮಾನವ ಕುಲಹಿತಚಿಂತಕರು, ನವಮನ್ವಂತರದ ದಾರ್ಶನಿಕರು, ಕವಿ–ಮನೀಷಿಗಳು, ಮಹಾಯೋಗಿಗಳು. ಮಾನವ ರೂಪದಲ್ಲಿಯ ಈ ದಿವ್ಯರತ್ನದ ಪರಿಚಯ ನನಗೆ ಶ್ರೀ ಬೇಂದ್ರೆಯವರ ಸಾನ್ನಿಧ್ಯದಲ್ಲಾಯಿತು.

ನಾನಾಗ ಹದಿನಾಲ್ಕು ಹದಿನೈದು ವಯಸ್ಸಿನ ಎಳೆಯ. ಹದಿಮೂರನೆಯ ವಯಸ್ಸಿನಲ್ಲಿಯೆ (1908), ಹೈಸ್ಕೂಲಿನ ಐದನೆಯ ತರಗತಿಯಲ್ಲಿ ನಾನಿರುವಾಗಲೆ ನನ್ನ ತಂದೆ ತೀರಿಹೋದರು. ಆದರೆ ಅಷ್ಟು ಚಿಕ್ಕ ವಯಸ್ಸಿನಲ್ಲಿಯೇ ಕನ್ನಡ–ಇಂಗ್ಲಿಷ್–ಸಂಸ್ಕೃತಗಳಲ್ಲಿ ಉದ್ಗ್ರಂಥಗಳನ್ನು ಓದಿ ತಿಳಿದುಕೊಳ್ಳುವಷ್ಟು ವಿದ್ಯೆಯನ್ನು, ಚಿತ್ರ–ಸಂಗೀತಗಳಲ್ಲಿ ಅಭಿಜಾತ ಅಭಿರುಚಿಯನ್ನು ನನಗೆ ಕೊಟ್ಟು ಹೋದರು. ತಂದೆಯವರ ಅಗಲಿಕೆಯಿಂದ ಶೂನ್ಯವಾದ ಮನಸ್ಸಿಗೆ ಚಿದಂಬರ ಸಗರನೆಂಬ ಕಿಂಚಿತ್ ಹಿರಿಯನಾದವನೊಬ್ಬನ ಗೆಳೆತನ ಸಿಕ್ಕಿದುದು ಭಗವತ್ಕೃಪೆಯೇ ಸೈ. ಆತನಿಗೆ 'ಈಶ್ವರ ಪ್ರಾಪ್ತಿ'ಯ ಹಂಬಲ. ಅಲ್ಪಕಾಲೀನವಾದ ಆತನ ಸಹವಾಸದಲ್ಲಿ ನನ್ನ ಭಾವಜೀವನಕ್ಕೆ ಭಕ್ತಿದೀಕ್ಷೆ ದೊರೆಯಿತು; ಅದು ನನ್ನ ಸ್ಥಾಯೀಭಾವವಾಯಿತು. ಆತನಿಂದ ಬೇಂದ್ರೆಯವರ ಪರಿಚಯ, ಬೇಂದ್ರೆಯವರೊಂದಿಗೆ ಆತನದು ಗೌರವಾದರಭಕ್ತಿ ಪೂರ್ಣ ಸಂಬಂಧ. ನಾನಾದರೋ ಪ್ರೇಮೋಪಜೀವಿ. ಬೇಂದ್ರೆ ಹಿರಿಯ ಗೆಳೆಯರು ಮಾತ್ರವಲ್ಲ, ಅಲ್ಪಾವಧಿಯಲ್ಲಿಯೇ ಕಕ್ಕುಲಾತಿಯ ಅಣ್ಣಂದಿರೂ ಆದರು. ಅವರ ಸಹವಾಸದಲ್ಲಿ ನನ್ನ ತಂದೆಯವರಿಂದ ಬಂದ ಸಹಜ ಶುದ್ಧ ಲೇಖನ ಸಂಸ್ಕಾರವು ಕಾವ್ಯಕಲೆಗಳ ಜೀವಕಳೆದುಂಬಿ ನಳನಳಿಸತೊಡಗಿತು.

ವಯಸ್ಸಿನಿಂದ ಹಿರಿಯರಾದ ಬೇಂದ್ರೆಯವರಲ್ಲಿಯ ಒಂದು ದೊಡ್ಡ ಗುಣವೆಂದರೆ ನಮ್ಮಂತಹ ಕಿರಿಯರೊಡನೆಯೂ ಬೆರೆತು, 'ಅವರಲ್ಲಿಯ ಸಾಹಿತ್ಯಿಕ–ಸಾಂಸ್ಕೃತಿಕ–ಆಧ್ಯಾತ್ಮಿಕ ಪ್ರವೃತ್ತಿಗಳಿಗೆ ಗಾಳಿಯೂದಿ ಅವುಗಳು ಪ್ರಜ್ವಲಿಸುವಂತೆ ಮಾಡುವುದು. ಪಲ್ಲಣ್ಣ (ಪ್ರಹ್ಲಾದ ನರೇಗಲ್ಲ), ನಾರಾಯಣ (ಸಂಗಮ), ಗೋವಿಂದ

(ಚುಳಕಿ) ಮೊದಲಾದವರು ಸುಮಾರಾಗಿ ನನ್ನ ವಯಸ್ಸಿನವರು, ಅವರು ನನಗಿಂತ ಕಿಂಚಿತ್ ಮೊದಲೇ ಬೇಂದ್ರೆ–ಸೂಜಿಗಲ್ಲಿನಿಂದ ಆಕೃಷ್ಟರಾದವರು. ಸರ್ವಶ್ರೀ ಶ್ರೀಧರ ಖಾನೋಳ್ಕರ, ಶಂ.ಬಾ. ಜೋಶಿ, ಬುರ್ಲಿ ಬಿಂದುಮಾಧವರು, ಬೆಟಗೇರಿ ಕೃಷ್ಣಶರ್ಮರು ಮೊದಲಾದವರು ಬೇಂದ್ರೆಯವರಿಗೆ ಸುಮಾರಾಗಿ ಸಮ–ವಯಸ್ಕರು – ರಾಷ್ಟ್ರೀಯ ಚಳವಳಿಯ ಸುಳಿಯಲ್ಲಿ ಹತ್ತಿರ ಹತ್ತಿರ ಬಂದವರು. ನಾನು ಬೇಂದ್ರೆಯವರ ಬಳಗದವನಾದ ಮೇಲೆ ಎರಡು ಮೂರು ವರ್ಷಗಳ ತರುವಾಯ ದಾದಾ (ಡಾ॥ ವಿ.ಕೃ. ಗೋಕಾಕ), ರಂಗಣ್ಣ (ಡಾ॥ ರಂಗನಾಥ ಮುಗಳಿ), ಬಸಣ್ಣ (ಶ್ರೀ ಬಸಪ್ಪ ದುಂಡಪ್ಪ ಅಕ್ಕಿ) ಬಂದು ಕೂಡಿಕೊಂಡರು. ಕಿಟ್ಟೂ(ಶ್ರೀ ಸಿದ್ದವ್ವನಹಳ್ಳಿ ಕೃಷ್ಣಶರ್ಮ)ನೂ ಸುಮಾರಾಗಿ ಅದೇ ಹೊತ್ತಿನಲ್ಲಿ ನಮ್ಮವನಾದ. ಅತ್ತ ವಿಜಾಪುರ ಜಿಲ್ಲೆಯ ಹಲಸಂಗಿಯ ಚೆನ್ನಮಲ್ಲಪ್ಪ ಗಲಗಲಿ ('ಮಧುರಚೆನ್ನ'), 'ಧೂಲಾಸಾಹೇಬ', ಕಾಪಸೆ ರೇವಪ್ಪ, ಮಾದಣ್ಣ, ಚಡಚಣದ (ಸಿಂಪಿ) ಲಿಂಗಣ್ಣ ಇತ್ಯಾದಿ ಈಕಡೆಗೂ ಗುಂಪಿನ ಗೆಳೆತನದ ಬಳ್ಳಿ ತನ್ನ ಕುಡಿಗಳನ್ನು ಚಾಚಿತು.

ಅದೊಂದು ಅದ್ಭುತ ಕಾಲಖಂಡ, ಲೋಕಮಾನ್ಯರು ನಮ್ಮನ್ನಗಲಿದ್ದರು. "Swaraj is my birth-right; and I will have it (ಸ್ವರಾಜ್ಯ ನನ್ನ ಜನ್ಮಸಿದ್ಧ ಹಕ್ಕು; ಅದನ್ನು ಪಡೆದೇ ತೀರುವೆ)" ಎಂಬ ಅವರ ವೀರಘೋಷಣೆ ನಾನಿನ್ನೂ ಹೈಸ್ಕೂಲ್ ವಿದ್ಯಾರ್ಥಿಯಿದ್ದಾಗಲೇ ನನ್ನ ದೇಶಭಕ್ತಿಯನ್ನು ಹೊಡೆದೆಬ್ಬಿಸಿತ್ತು. ಟಿಳಕರ ಸ್ಥಾನದಲ್ಲಿ ಗಾಂಧೀಜಿ ಬಂದರು. ನಮ್ಮ ಮುಂದೆ ಅವರಿರಿಸಿದ ದೇಶಕ್ಕಾಗಿ ಸರ್ವಸ್ವದ ತ್ಯಾಗದ ಆದರ್ಶ, ಸತ್ಯ–ಅಹಿಂಸೆ–ಸಾತ್ತ್ವಿಕ ಸರಳ ಜೀವನದ ಆವಾಹನ ನಮ್ಮನ್ನೆಲ್ಲ ಸೆರೆಹಿಡಿದಿದ್ದವು. ನಮ್ಮ ದೇಶಭಕ್ತಿ–ಈಶಭಕ್ತಿಗಳಿಗೆ ಬೇಂದ್ರೆಯವರ ಸಾನ್ನಿಧ್ಯದಲ್ಲಿ ಸಾಹಿತ್ಯ ಕಲಾತ್ಮಕ ಸಂಸ್ಕಾರಗಳು ದೊರೆತವು. ಬೇಂದ್ರೆಯವರು ಮಾಡಿದ ಶ್ರೀ ಅರವಿಂದ ತತ್ತ್ವಾಧ್ಯಯನದ ಆಳದಲ್ಲಿ ನಾವೂ ಮನದಣಿಯೆ ಈಜಿದೆವು. ನಾವು ನಮ್ಮ ಕಲ್ಪನೆಯ ಗರಿಗೆದರಿ ಭಾರತದ ಹೊಸ ಆಶೆ–ಆಕಾಂಕ್ಷೆಗಳ ಗಗನದಲ್ಲಿ ಹಾರಿಯಾಡಿದೆವು. ನಾನು ಚಿತ್ರಗಳನ್ನು ಬಿಡಿಸಿದೆ, ಕವನಗಳನ್ನು ಕಟ್ಟಿದೆ, ಗೂಢ ಸಾಹಿತ್ಯ ತತ್ತ್ವವಿವೇಚಕ ಪ್ರಬಂಧಗಳನ್ನು ಬರೆದೆ, ನನಗೆ ಸಾಧ್ಯವಿದ್ದಷ್ಟು ರಾಷ್ಟ್ರೀಯ ಆಂದೋಳನದಲ್ಲಿ ಸಕ್ರಿಯ ಭಾಗವಹಿಸಿದೆ. ಆಗಿನ ಜೀವನಾನುಭವಗಳನ್ನು ನೆನೆಸಿದಾಗ, "Bliss it was in that dawn to be alive, But to be young was very heaven" (ಆ ಉಷಃಕಾಲದಲ್ಲಿ ಜೀವಿಸಿದುದೆ ಒಂದು ಅನಿರ್ವಚನೀಯ ಆನಂದಾನುಭವ, ಆದರೆ

ತರುಣರಾಗಿರುವುದು ಸಾಕ್ಷಾತ್ ಸ್ವರ್ಗವೆ ಆಗಿದ್ದಿತು) ಎಂಬ ವರ್ಡ್ಸ್ವರ್ಥ್ ಕವಿಯ ಸಾಲುಗಳು ಮತ್ತೆ ಮತ್ತೆ ನೆನಪಿಗೆ ಬರುತ್ತವೆ.

ಶ್ರೀ ರಾಮಕೃಷ್ಣ – ವಿವೇಕಾನಂದ – ಶಾರದಾ ದೇವಿಯವರು, ಕವಿ ರವೀಂದ್ರರು, ಕಾಳಿದಾಸ – ಭವ ಭೂತ್ಯಾದಿ ಕವಿಗಳು, ವೈದಿಕ – ಔಪನಿಷದಿಕ – ಗೀತಾಸಾಹಿತ್ಯ, ದಾಸರು – ವಚನಕಾರರು, ಹಳೆಗನ್ನಡದ ಕವಿಗಳು, ಶೇಕ್ಸ್ಪಿಯರ್, ಶೆಲ್ಲಿ, ವರ್ಡ್ಸ್ವರ್ಥ್ – ಕೀಟ್ಸ್ – ಬೈರನ್ – ಬರ್ನ್ಸ್ ಆದಿ ಆಂಗ್ಲ ರೋಮಾಂಟಿಕ್ ಯುಗದ ಕವಿಗಳು, ಅಮೆರಿಕನ್ ಚಿಂತಕ ಇಮರ್ಸನ್, ಮಹಾರಾಷ್ಟ್ರದ ಕವಿ ನಾಟಕಕಾರ ಗಡಕರಿ ಇತ್ಯಾದಿ ಹಲವೊಂದು ಪ್ರಭಾವಗಳಿಂದ ರೂಪಿತವಾದ ಬೇಂದ್ರೆಯವರ ಬಹುಮುಖ ವ್ಯಕ್ತಿತ್ವಕ್ಕೆ ಶ್ರೀ ಅರವಿಂದರ ವಿಶ್ವ ದೃಷ್ಟಿಯುಳ್ಳ ಭಾಗವತ ಜೀವನದ ಬೋಧೆ ಒಂದು ಮೇಟಿಗಂಬವಾಗಿ ಪರಿಣಮಿಸಿತ್ತೆಂದು ಹೇಳಿದರೆ ತಪ್ಪಾಗದು. ಬೇಂದ್ರೆ ಬರೆದುದಕ್ಕಿಂತಲೂ ಹೆಚ್ಚು ಮಾತನಾಡುವರು, 'ದೀಪಾದ್ದೀಪ ಇವೋತ್ಥಿತಃ' ಎಂಬ ಕಾಳಿದಾಸೋಕ್ತಿಯಂತೆ ತಮ್ಮ ಅಂತಃಪ್ರಭೆಯಿಂದ ಹಲವೊಂದು ಜೀವಜ್ಯೋತಿಗಳು ಬೆಳಗುವಂತೆ ಮಾಡಿದರು, ಇನ್ನೂ ಮಾಡುತ್ತಿರುವರು. ಐಸ್ಬರ್ಗ್(ಸಾಗರದಲ್ಲಿ ತೇಲುವ ಹಿಮ ಪರ್ವತ)ದಂತಹ ಅವರ ವ್ಯಕ್ತಿತ್ವದ ಕೊಂಚ ಭಾಗ ಮಾತ್ರ ಸಾಹಿತ್ಯ ರೂಪ ತಾಳಿ ಹೊರಗಣ್ಣಿಗೆ ಕಾಣುತ್ತಿದೆ. ಅವರೀ ಸ್ನೇಹಕಾಯಕದ ಫಲವೆ 'ಗೆಳೆಯರ ಗುಂಪು;' ಸ್ನೇಹಮಯ ಸನ್ನಿವೇಶದಲ್ಲಿ ಬಾಹ್ಯ ನಿಯಮ–ನಿಬಂಧನೆಗಳಿಲ್ಲದೆ ಭಾವಿಸುವ–ಜೀವಿಸುವ, ಕಲ್ಪಿಸುವ–ಕನವರಿಸುವ, ಓದುವ–ಬರೆಯುವ ಸಮವಿಚಾರಿ–ಆಚಾರಿಗಳ ಸಮಾವೇಶವಾಗಿ ಇದು ರೂಪುಗೊಂಡು 'ನವಕರ್ನಾಟಕದ ಪುನರುಜ್ಜೀವನ(Renaissance of Karnataka)'ಕ್ಕೆ ಉತ್ತರ ಕರ್ನಾಟಕದ ಪರವಾಗಿ ತನ್ನ ವೈಶಿಷ್ಟ್ಯಪೂರ್ಣ ಕೊಡುಗೆಯನ್ನು ನೀಡಿತು.

* * *

ಈ ಪ್ರಬಂಧದ ಇನ್ನು ಮುಂದಿನ ಭಾಗವು ಈವರೆಗಿನ ಸಾಮಾನ್ಯ ವಿವೇಚನೆಯ ಹಲವಾರು ವಿವರಗಳನ್ನೊಳಗೊಂಡಿದೆ. ಇದಕ್ಕೆ ಬೇಕಾಗುವ ಸಹಾಯ–ಸಲಕರಣೆಗಳನ್ನು ಮಿತ್ರವರ್ಯ ಪ್ರೊ. ಪ್ರಹ್ಲಾದ ನರೇಗಲ್ಲರು ಭೂರಿಯಾಗಿ ಒದಗಿಸಿದ್ದಾರೆ. 1972 ಶ್ರೀ ಅರವಿಂದರ ಜನ್ಮ ಶತಮಾನೋತ್ಸವ ಸಂವತ್ಸರವಷ್ಟೇ: ಅದಕ್ಕಾಗಿ ಶ್ರೀ ನರೇಗಲ್ಲರು ಲೇಖನ ಭಾಷಣ–ಪ್ರಚಾರಾತ್ಮಕ ಪ್ರವಾಸಗಳಿಂದ

ತುಂಬಾ ಶ್ರಮಿಸಿದ್ದಾರೆ; ಇನ್ನೂ ಶ್ರಮಿಸುತ್ತಲಿದ್ದಾರೆ. ಅವರು ಬರೆದಿಟ್ಟ–ಕತ್ತರಿಸಿ ಕೂಡಿಸಿಟ್ಟ ಟಿಪ್ಪಣಿಗಳನ್ನು ನಾನು ಸೂರೆಗೊಂಡಿದ್ದೇನೆ; ಅವರಾದರೂ ಅತ್ಯಂತ ಸಂತೋಷದಿಂದ ಅವನ್ನು ಕೊಟ್ಟಿದ್ದಾರಲ್ಲದೆ ನನ್ನೊಡನೆ ಆ ಕುರಿತು ವಿಪುಲವಾಗಿ ಚರ್ಚಿಸಿದ್ದಾರೆಂಬುದನ್ನು ಕೃತಜ್ಞತೆಯಿಂದ ಉಲ್ಲೇಖಿಸುವುದು ನನ್ನ ಕರ್ತವ್ಯವಾಗಿದೆ. ಶ್ರೀ ಅರವಿಂದರ ಸಾಹಿತ್ಯದ ಅನುವಾದ ವಿವೇಚನ–ನಿರೂಪಣಗಳಲ್ಲಿ ಮತ್ತಾ ಮಂಗಲಪ್ರಭಾವದಿಂದ ಸ್ವ ಹಾಗೂ ಜನಮನ ಮಡಿಮಾಡಿಕೊಳ್ಳುವಿಕೆಯಲ್ಲಿ ಉತ್ತರ ಕರ್ನಾಟಕದ ಹಿರಿಯರ ಹಾಗೂ ಗೆಳೆಯರ ಭಾಗವೇನು ಎಂಬುದನ್ನು ಈ ಕೆಳಗೆ ದಿಗ್ದರ್ಶಿಸಲಾಗಿದೆ.

ಕರ್ನಾಟಕದಲ್ಲಿ ಶ್ರೀ ಅರವಿಂದರ ಪ್ರಭಾವ ಎಂತು ಮೊದಲಾಯಿತು ಹಾಗೂ ಬೇರೂರಿತು – ನೋಡುವಾ. 1914ರಲ್ಲಿಯೇ 'ಆರ್ಯ' ಪತ್ರಿಕೆಯನ್ನು ಕರ್ನಾಟಕ ಕುಲಪುರೋಹಿತ ಶ್ರೀ ಆಲೂರ ವೆಂಕಟರಾಯರು ಧಾರವಾಡದಲ್ಲಿಯೂ ಶ್ರೀ ಬೇಂದ್ರೆಯವರು ಪುಣೆಯಲ್ಲಿಯೂ ತರಿಸಿ ಓದತೊಡಗಿದರು. 1921ರಲ್ಲಿ (ಶ್ರೀಮಾತೆಯವರು ಎರಡನೆಯ ಸಲ ಭಾರತಕ್ಕೆ ಬಂದು ಶ್ರೀ ಅರವಿಂದರ ಯೋಗ ಸಾಧನೆಯಲ್ಲಿ ಶಿಷ್ಯರೂ ಪಾಲುಗಾರ್ತಿಯರೂ ಆದ ಸಂವತ್ಸರದಲ್ಲಿ) ಶ್ರೀ ಆಲೂರರ ಹಿರಿತನದಲ್ಲಿ ಗೆಳೆಯರ ಗುಂಪು ಶ್ರೀ ಅರವಿಂದರ ಬೋಧನೆಯಿಂದ ಪ್ರಭಾವಿತವಾಗಿ "ಜಯ ಕರ್ನಾಟಕ" ಮಂತ್ರದೊಂದಿಗೆ ಆ ಹೆಸರಿನ ಮಾಸಪತ್ರಿಕೆಯನ್ನು ಧಾರವಾಡದ ಸಾಧನಕೇರಿಯಲ್ಲಿ ಪ್ರಾರಂಭಿಸಿತು. ಹೆಸರಿಗೆ ತಕ್ಕಂತೆ ಅದು ಕರ್ನಾಟಕದ ಪುನರುಜ್ಜೀವನದ ಧ್ವಜಪತ್ರಿಕೆ ಎನಿಸಿತು. ಮುಂಚಿನ ಎಂಟು ವರ್ಷ ಶ್ರೀ ಆಲೂರ ವೆಂಕಟರಾಯರ ಸಂಪಾದಕತ್ವದಲ್ಲಿಯೂ ಮುಂದಿನ ಎಂಟು ತಿಂಗಳು ಶ್ರೀ ಬೇಂದ್ರೆಯವರ ಸಂಪಾದಕತ್ವದಲ್ಲಿಯೂ ಆ ತರುವಾಯದ ಹದಿನಾರು ವರ್ಷ ಶ್ರೀ ವಿನೀತ (ಆಗಿನ ಬೆಳಗಾವಿ) ರಾಮಚಂದ್ರರಾಯರ ಸಂಪಾದಕತ್ವದಲ್ಲಿಯೂ 'ಜಯ ಕರ್ನಾಟಕ'ದಲ್ಲಿ ಶ್ರೀ ಅರವಿಂದರ ತತ್ತ್ವಜ್ಞಾನವನ್ನು ಕುರಿತು ಹಲವಾರು ಲೇಖನಗಳು ಬಂದಿವೆ. ಅತ್ತ ಮೈಸೂರಿನ ಶ್ರೀ ಅಗರಂ ರಂಗಯ್ಯನವರು 1922ರಲ್ಲಿ ಶ್ರೀ ಅರವಿಂದರ ದರ್ಶನ ಪಡೆದರು. ಶ್ರೀ ಅರವಿಂದರು ಅಧಿವಾನಸ ಸಿದ್ಧಿಯನ್ನು 1926ರ ನವಂಬರ 24 ರಂದು ಪಡೆದರು; ಆ ವರುಷವೇ ಶ್ರೀ ಬೇಂದ್ರೆಯವರು ಅಶ್ವಿನ ನವರಾತ್ರಿಯಲ್ಲಿ ಕನ್ನಡಿಗರು ಅದನ್ನು 'ನಾಡಹಬ್ಬ'ವಾಗಿ ಆಚರಿಸಬೇಕೆಂದು ಕರೆ

ಕೊಟ್ಟಾಗ, ಗೆಳೆಯರ ಗುಂಪಿನವರು ಆ ಸಂದೇಶವನ್ನು, ಊರು ಊರಿಗೆ ತಲುಪಿಸಿದರು. ಅಂತೂ ಅಂದಿನಿಂದ ನವರಾತ್ರಿಯು ಕರ್ನಾಟಕದ ನಾಡಹಬ್ಬವಾಗಿ ಪರಿಣಮಿಸಿತು. 1937ರಲ್ಲಿ ಶ್ರೀ ಅರವಿಂದರು 'ಸಾವಿತ್ರಿ' ಆಂಗ್ಲ ಮಹಾಕಾವ್ಯದ ರಚನೆಗೆ ತೊಡಗಿದರು; ಅದೇ ವರುಷ ಶ್ರೀ ಮಧುರಚೆನ್ನರು ಶ್ರೀ ಅರವಿಂದ–ಶ್ರೀಮಾತೆಯವರ ದರ್ಶನವನ್ನು ಪ್ರಥಮವಾಗಿ ಪಡೆದರು. ಅವರ ಉತ್ಕಟಭಕ್ತಿಯ ಪರಿಣಾಮವಾಗಿ ಹಲಸಂಗಿಯ ಹಾಗೂ ಉತ್ತರ ಕರ್ನಾಟಕದ ಹಲವಾರು ಮುಮುಕ್ಷುಗಳು–ಜಿಜ್ಞಾಸುಗಳು ಪಾಂಡಿಚೇರಿಯ ಯಾತ್ರೆಯನ್ನು ಕೈಕೊಳ್ಳ–ತೊಡಗಿದರು. 1940ರಲ್ಲಿ ವಂಟಮುರಿಯ ಶ್ರೀ ಶಂಕರಗೌಡರು ತಮ್ಮ ದೊಡ್ಡಪ್ಪ ಶ್ರೀ ಬಸವ ಪ್ರಭುಗಳೊಂದಿಗೆ ಗುರುದರ್ಶನ ಪಡೆದರು; ಅವರ ಪ್ರೋತ್ಸಾಹದ ಪರಿಣಾಮವಾಗಿ ಬೇಂದ್ರೆ, ಶಾಸ್ತ್ರಿ, ಗೋಕಾಕ, ಮುಗಳಿ, ಬಬಲೇಶ್ವರ, ಮಾಳವಾಡ ಮೊದಲಾದವರು 1942 ರಿಂದ 1950ರ ಅವಧಿಯಲ್ಲಿ ಶ್ರೀಗುರು–ಶ್ರೀಮಾತೆಯರ ದರ್ಶನವನ್ನು ಪಡೆಯುವಂತಾಯಿತು. 1950ರಲ್ಲಿ ಪ್ರೊ. ಅ. ವೆಂಕಪ್ಪ ಶಾಸ್ತ್ರಿ, ಶ್ರೀ ನಾಡಿಗೇರ ಲಕ್ಷ್ಮಣರಾಯರು, ಶ್ರೀ ನಾಯಿಕ ವೆಂಕಟರಾಯರು ಮೊದಲಾದ–ವರೊಂದಿಗೆ ಈ ಪ್ರಬಂಧದ ಲೇಖಕನು ಶ್ರೀ ಅರವಿಂದರ ಜನ್ಮತಿಥಿ – ಆಗಸ್ಟ್ ಹದಿನೈದರಂದು ಪಾಂಡಿಚೇರಿಗೆ ಹೋಗಿ ವಿಭೂತಿದ್ವಯರ ದರ್ಶನ ಪಡೆದನು; ಅದೇ ವರ್ಷ ಡಿಸೆಂಬರ 5ರಂದು ಶ್ರೀ ಅರವಿಂದರು ಮಹಾಸಮಾಧಿಯನ್ನೈದಿದರು. ಎರಡನೆಯ ಸಲ 1952ರಲ್ಲಿ ಒಬ್ಬನೇ ಶ್ರೀ ಅರವಿಂದಾಶ್ರಮಕ್ಕೆ ಹೋಗಿ, ಶ್ರೀಮಾತೆಯವರ ದರ್ಶನ ಪಡೆದು, ಶ್ರೀ ಮಾಧವರಾವ ಪಂಡಿತರ ಸ್ನೇಹಪೂರ್ಣ ಸಹಾಯದಿಂದ ಶ್ರೀ ಅರವಿಂದಾಶ್ರಮದಲ್ಲಿಯ ವಿವಿಧ ಚಟುವಟಿಕೆಗಳನ್ನು ಸೂಕ್ಷ್ಮವಾಗಿ ಅವಲೋಕಿಸಿ, ಹಲವಾರು ಹಿರಿಯ ಸಾಧಕರೊಡನೆ ಸಂಭಾಷಿಸಿ, ಶ್ರೀ ಅರವಿಂದರ ಪವಿತ್ರ ಸಮಾಧಿ ಸ್ಥಳದಿಂದ ಮರೆಯಲಾಗದ ಸ್ಫೂರ್ತಿ ಪಡೆದು ಮರಳಿದನು. ಅದಿರಲಿ, ಮಧುರಚೆನ್ನರು 'ಮಾತೃ ಶಿಶು'ವಾದರು; ತಮ್ಮ ಆತ್ಮಿಕ ಸಾಧನೆಯನ್ನು ಮುಂದುವರಿಸಿದ್ದಲ್ಲದೆ ಹಲಸಂಗಿ ನಾಡಿನಲ್ಲಿ ನೂರಾರು ಕುಟುಂಬಗಳ ಸಾವಿರಾರು ಸದ್ಭಕ್ತರು ಪಾಂಡಿಚೇರಿಗೆ ಗುರುಗಳ ನಾಲ್ಕು ವಾರ್ಷಿಕ ದರ್ಶನಗಳಿಗೆ ತಂಡೋಪತಂಡವಾಗಿ ಹೋಗಲು ಕಾರಣರಾದರು. ಹಲಸಂಗಿಯಲ್ಲಿ, ತರುವಾಯ ಚಡಚಣದಲ್ಲಿ 'ಶ್ರೀ ಅರವಿಂದ ಗ್ರಂಥಮಾಲೆ'ಯ ಪ್ರಕಾಶನ, ಗದಗಿನಿಂದ ಶ್ರೀ ಕೆ.ಎಂ. ಕುಲಕರ್ಣಿ ವಕೀಲರ ಭಕ್ತಿ ಪೂರ್ಣ ಪ್ರಯತ್ನದ ಫಲವಾಗಿ 4–5 ವರ್ಷ 'ಅಮೃತ'ವೆಂಬ ಕೈ ಬರಹದ ಪತ್ರಿಕೆಯ ಪ್ರಕಟಣೆ, ಇದೇ

ಗಡುವಿನಲ್ಲಿ ಉತ್ತರ ಕರ್ನಾಟಕದಲ್ಲಿ 15–20 ಶ್ರೀ ಅರವಿಂದ ಕೇಂದ್ರಗಳು ಒಡಮೂಡಿ ಧ್ಯಾನ–ಪ್ರಾರ್ಥನೆ – ಗುರು ಗ್ರಂಥ ಪಠನ – ಅನುವಾದಗಳಂಥ ಕಾರ್ಯಕ್ರಮಗಳನ್ನು ಕೈಕೊಳ್ಳುವಿಕೆ, 1947ರಲ್ಲಿ ಭಾರತವು ಸ್ವತಂತ್ರವಾದ ಮೇಲೆ ಶ್ರೀ ಅಂದಾನಪ್ಪ ದೊಡ್ಡ ಮೇಟಿಯವರು 1949ರ ಜನವರಿಯಲ್ಲಿ ಗದಗಿನಲ್ಲಿ 'ಕಲ್ಕಿ' ಎಂಬ ವಾರಪತ್ರಿಕೆಯನ್ನು ಹೊರಡಿಸಿ ಶ್ರೀ ನಾರಾಯಣ ಸಂಗಮರ ನೆರವಿನಿಂದ 2 ವರ್ಷ ಕಾಲ ನಡೆಯಿಸಿದುದು, ಶ್ರೀ ದಿವಾಕರ ರಂಗರಾಯರು 1952ರಲ್ಲಿ 'ಮಹಾಯೋಗಿ' ಎಂಬ ಶ್ರೀ ಅರವಿಂದರ ಚರಿತ್ರೆಯನ್ನು ಇಂಗ್ಲಿಷಿನಲ್ಲಿಯೂ ಅದರ ಕನ್ನಡ ಅನುವಾದವನ್ನು ಶ್ರೀ ನರೇಗಲ್ಲ–ಸಂಗಮರ ಸಹಾಯದಿಂದ ಕನ್ನಡದಲ್ಲಿಯೂ ಪ್ರಕಟಿಸಿದುದು ಉಲ್ಲೇಖಿಸಬೇಕಾದ ಘಟನೆಗಳಾಗಿವೆ. ಶ್ರೀ ದಿವಾಕರರ ಮತ್ತು ಪ್ರೊ. ಅ. ವೆಂಕಪ್ಪ ಶಾಸ್ತ್ರಿಗಳ ನೆರವಿನಿಂದ ಹುಬ್ಬಳ್ಳಿಯ ಮೂರು ಸಾವಿರ ಮಠದ ಪೂಜ್ಯ ಜಗದ್ಗುರುಗಳು ಶ್ರೀಮಾತೆಯವರ ದರ್ಶನವನ್ನು ಪಡೆದಿರುವರು. ಶ್ರೀ ಮಧುರಚೆನ್ನರ ನೇತೃತ್ವದಲ್ಲಿ ಹಲಸಂಗಿ ನಾಡಿನಲ್ಲಿ ಶ್ರೀ ಅರವಿಂದರ ವಾರ್ಷಿಕ ಸಮ್ಮೇಳನಗಳು 1947 ರಿಂದ ಅಖಂಡವಾಗಿ ಕಳೆದ 27 ವರ್ಷ ಸದ್ದಿಲ್ಲದೆ ನಡೆಯುತ್ತ ಬಂದಿವೆ. ಶ್ರೀ ಅರವಿಂದಾಶ್ರಮದ ಶಿಸ್ತು–ಓರಣಗಳು ಅಲ್ಲಿ ಮೈವೆತ್ತಿದುದನ್ನು ನೋಡಿಯೇ ನಂಬಬೇಕು. ಈ ಎಲ್ಲ ಚಟುವಟಿಕೆಗಳ ಮೂಲಕ 'ಶ್ರೀ ಅರವಿಂದ ಪ್ರಜ್ಞೆ' 'ಶ್ರೀ ಅರವಿಂದ ಸಂಸ್ಕೃತಿ' ಅತ್ತ ಕಡೆಯ ಹಳ್ಳಿಪಳ್ಳಿಗಳಲ್ಲಿ ಹರಡುತ್ತಲಿದೆ, ನೆಲಸುತ್ತಲಿದೆ. ದಾಂಡೇಲಿಯ ಶ್ರೀ ಅರವಿಂದ–ಮಾತಾ ಕೇಂದ್ರವು ಆ ಕಾಸ್ಮಾಪೊಲಿಟನ್ ನಗರದಲ್ಲಿ ಹಲಸಂಗಿಯವರ ಮಾದರಿಯಲ್ಲಿಯೆ ಚಟುವಟಿಕೆಗಳನ್ನು ನಡೆಯಿಸುತ್ತಿರುವುದು ಹೆಮ್ಮೆಯ ಸಂಗತಿ. ಹುಬ್ಬಳ್ಳಿಯಿಂದ 25 ಮೈಲು ದೂರದಲ್ಲಿ ಹುಬ್ಬಳ್ಳಿ – ಕುಮಟಾ ಮಾರ್ಗದಲ್ಲಿ ಶ್ರೀ ವಸಂತ ಕುಲಕರ್ಣಿಯವರು ತಮ್ಮ ವಿಶಾಲ ಆಸ್ತಿಯನ್ನೆಲ್ಲ ಶ್ರೀ ಅರವಿಂದಾಶ್ರಮಕ್ಕೆ ಸಮರ್ಪಿಸಿದ್ದು, ಅದು ಆಶ್ರಮದ ಪರವಾಗಿ 'ಮಾತಾಪುರ' ಎಂಬ ಹೆಸರಿನಲ್ಲಿ ಆಶ್ರಮದವರ ನೇತೃತ್ವದಲ್ಲಿ ವಿಕಾಸಗೊಳ್ಳುತ್ತಿದೆ; ಆಶ್ರಮದ ದ್ಯುಮನ್ ಭಾಯಿಯೆಂಬ ಹಿರಿಯ ಸಾಧಕರ ಕಣ್ಣರಿಕೆಯಲ್ಲಿ ಅದರ ಶಾಖೆಯಾಗಿ ಒಂದು ಮಾದರಿ ಫಾರ್ಮ್ ಆಗಿ ರೂಪುಗೊಳ್ಳುತ್ತಿದೆ. ಕಳೆದ ಕೆಲ ತಿಂಗಳವರೆಗೂ ಪಾಂಡಿಚೇರಿಯ ಲೆಫ್ಟಿನೆಂಟ್ ಗವರ್ನರರಾಗಿದ್ದ ಮಾನ್ಯ ಶ್ರೀ ಬಸಪ್ಪ ದಾನಪ್ಪ ಜತ್ತಿಯವರ ಪ್ರಯತ್ನದ ಫಲವಾಗಿ ಶ್ರೀ ಅರವಿಂದಾಶ್ರಮದಲ್ಲಿ 'ಕರ್ನಾಟಕ ನಿಲಯ' ಎಂಬ ಅತಿಥಿ ಗೃಹ ಮೈವೆತ್ತಿ ನಿಂತಿದೆ. ಇಂದು ಆಶ್ರಮದಲ್ಲಿ ನೂರಾರು

ಕನ್ನಡಿಗರು ಸರ್ವಾರ್ಪಣ ಮಾಡಿದ ಸಾಧಕರಾಗಿ ನಿಂತಿದ್ದಾರೆ. ಆಶ್ರಮದ ಹೊರಗಿನ ಕಳಕಳಿಯ ಕನ್ನಡ ಸಾಧಕರಲ್ಲಿ ಚಡಚಣದ ಸಂಗಮೇಶ್ವರ ಹೈಸ್ಕೂಲಿನ ಮುಖ್ಯಾಧ್ಯಾಪಕರಾದ ಶ್ರೀ ಎಂ.ಆರ್. ಜಹಾಗಿರದಾರರೊಬ್ಬರು; ಇವರು 'ಸಾವಿತ್ರಿ' ಮಹಾಕಾವ್ಯದ ವಿಶೇಷ ವ್ಯಾಸಂಗಿಗಳು. 'ಸಾವಿತ್ರಿ ಪರಿಚಯ'ವನ್ನು ಕಳೆದ 9 ವರ್ಷಗಳಿಂದ 'ದೀಪ್ತಿ'ಯಲ್ಲಿ ಕನ್ನಡದಲ್ಲಿ ಧಾರಾವಾಹಿಯಾಗಿ ಮಾಡಿಕೊಡುತ್ತಲಿದ್ದಾರೆ. ವಿಜಾಪುರದ ದರ್ಬಾರ ಹೈಸ್ಕೂಲಿನಲ್ಲಿ ಅಧ್ಯಾಪಕರಾಗಿರುವ ಶ್ರೀ ಆರ್.ಜಿ. ದೇಸಾಯಿಯವರು 'ಮಿಂಚಿದ ತಾರೆಯರು' ಎಂಬ ಶೀರ್ಷಿಕೆಯ ಕೆಳಗೆ 'ಪ್ರದೀಪ'ದಲ್ಲಿ ಶ್ರೀ ಅರವಿಂದಾಶ್ರಮದ ಹಿರಿಯ ದಿವಂಗತ ಸಾಧಕರಾದ ಶ್ರೀ ಅಂಬಾಲಾಲ ಪುರಾಣಿ, 'ಪವಿತ್ರ' ಮೊದಲಾದವರ ಪರಿಚಯವನ್ನು ಮಾಡಿಕೊಡುತ್ತಲಿದ್ದಾರೆ. ಶ್ರೀ ಅರವಿಂದರ "Essays on The Gita" ಎಂಬ ಬೃಹತ್ಕೃತಿಯು "ಗೀತಾ ಪ್ರಬಂಧಗಳು" ಎಂಬ ಹೆಸರಿನಲ್ಲಿ ಶ್ರೀ ಎಂ. ಎಸ್. ನಾಗರಹಳ್ಳಿಯವರಿಂದ ಅನುವಾದಿಸಲ್ಪಟ್ಟು, (ಸು. 580 ಪುಟಗಳ ಗ್ರಂಥ ರೂಪದಲ್ಲಿ) ಪ್ರಕಾಶಿತವಾದುದು ಕನ್ನಡದಲ್ಲಿ ಶ್ರೀ ಅರವಿಂದರ ಸಾಹಿತ್ಯ ಸೃಷ್ಟಿಗೆ ಬಹು ದೊಡ್ಡ ಕಾಣಿಕೆಯೇ ಸರಿ. ಮಾಳವಾಡ ದಂಪತಿಗಳು ಹಲವಾರು ವರ್ಷಗಳಿಂದ ಶ್ರೀ ಅರವಿಂದಾಶ್ರಮದ ಭಕ್ತಿಯುತ ಯಾತ್ರಿಕರು; ತತ್ರಾಪಿ ಸೌ. ಶಾಂತಕ್ಕ (ಶಾಂತಾದೇವಿ ಮಾಳವಾಡ) 'ತಾಯಿ'ಯವರ ಒಲಮೆಯ ಮಗಳು. ಪ್ರೊ. ಮಾಳವಾಡರ 'ಶ್ರೀ ಅರವಿಂದರ ಸಂಗಮ' ಪರಿಪಕ್ವ ಕೃತಿ. ಇವರು ಏನನ್ನು ಬರೆದರೂ ಅಧಿಕಾರಯುತ, ಆಳ ವ್ಯಾಸಂಗ ಪರಿಪೂರ್ಣ, ಅನುಭವ ಸಂಪನ್ನ, ಸೂಕ್ಷ್ಮ ವಿಚಾರಪರಿಪ್ಲುತ ಎಂಬುದಕ್ಕೆ ಕಳೆದ ವರ್ಷ ಆಗಸ್ಟ್ 1 ರಂದು ಪ್ರಕಟವಾದ ಈ 130 ಪುಟಗಳ ಗ್ರಂಥ ಕೈಗನ್ನಡಿಯಾಗಿದೆ. ಶ್ರೀ ಅರವಿಂದರ ಜೀವನ ಚರಿತ್ರೆಯ ಮುಖ್ಯಾಂಶಗಳು, ಅವರ ತತ್ತ್ವಜ್ಞಾನ, ಯೋಗಬೋಧೆ, ಆಶ್ರಮದ ವರ್ಣನೆ ಇವೆಲ್ಲವುಗಳ ಸ್ವಾನುಭವಪೂರ್ಣ ವಿವರಣೆಯಾಗಿದೆ ಈ ಹೊತ್ತಿಗೆ. ಪ್ರೊ. ಮಾಳವಾಡರ ಇನ್ನೊಂದು ಕೃತಿ 'ಶ್ರೀಮಾತೆಯವರ ವಿಚಾರಧಾರೆ.' ಇದೂ ತುಂಬ ತೂಕದ ಪ್ರಕಟನೆ. ಶ್ರೀ ಅರವಿಂದಾಶ್ರಮದ ಹಿರಿಯ ಸಾಧಕರಾದ ಶ್ರೀ ಮಾಧವರಾವ ಪಂಡಿತರ ಮುನ್ನುಡಿಯೊಳಗಿನ ಕೆಳಗಿನ ಮಾತುಗಳು ಅದರ ಬೆಲೆಯನ್ನು ಹೇಳುತ್ತವೆ: "ಪ್ರೊ. ಮಾಳವಾಡರ ಪ್ರಸ್ತುತ ಲೇಖನ ಸಂಗ್ರಹದಲ್ಲಿಯ ವಿವೇಚನೆಯಿಂದ ಕಂಡುಬರುವಂತೆ ಶ್ರೀಮಾತೆಯವರ ವಿಚಾರಧಾರೆಯು ವ್ಯಾಪಕವಾಗಿದ್ದು ಜೀವನದ ವಿವಿಧ ಮುಖಗಳನ್ನು ಕುರಿತು ಬೆಳಕನ್ನು ಒದಗಿಸುತ್ತದೆ...

ಶ್ರೀಮಾತೆಯವರ ಬೋಧನೆಯು ನೇರ, ಸ್ಪಷ್ಟ ಮತ್ತು ವ್ಯಾವಹಾರಿಕ. ಈ ಬೋಧನೆಯು ಜೀವನ ಮತ್ತು ಯೋಗಗಳ ನಡುವೆ ಹೊಂದಿಸಲು ಸಾಧ್ಯವಲ್ಲದ ಅಂತರವಿದೆಯೆಂಬುದನ್ನು ಒಪ್ಪುವುದಿಲ್ಲ. ವಸ್ತುತಃ ಶ್ರೀಮಾತೆಯವರ ದರ್ಶನದ ಪ್ರಥಮ ತತ್ತ್ವವೆಂದರೆ, ಯೋಗಾನು ಸಂಧಾನವನ್ನು ಒಳಗೊಂಡ ಜೀವನವೇ ಅರ್ಥಪೂರ್ಣ.... ಆದರೆ ಬಾಳಿನಲ್ಲಿ ವ್ಯಕ್ತಿ ಜೀವನದ ವಿವಿಧಾಂಶಗಳಲ್ಲಿ, ವಿಶ್ವದ ಜೀವಿಗಳೊಡನೆ ಸಮರಸ ಸಾಧನೆಯು ಮೊದಲು ನಡೆಯಬೇಕೆಂಬುದು ಶ್ರೀಮಾತೆಯವರ ಯೋಗದಲ್ಲಿ ಪ್ರಮುಖವಾಗಿದೆ. ಶ್ರೀಮಾತೆಯವರ ಬೋಧನೆ–ಯಲ್ಲಿಯ ಈ ಮುಖವನ್ನು ಆರಿಸಿ ಕೊಂಡು ಪ್ರೊ. ಮಾಳವಾಡರು ಪ್ರಸ್ತುತ ಹೊತ್ತಿಗೆಯಲ್ಲಿ ಅದನ್ನು ಹಂತಹಂತವಾಗಿ, ಸರಳವಾಗಿ, ವಿವರಣಾತ್ಮಕವಾಗಿ ವಿವೇಚಿಸಿರುವುದು ಸಂತೋಷದ ಸಂಗತಿ... ನೀತಿ, ಅಧ್ಯಾತ್ಮ, ಅನುಭಾವಗಳ ಗಹನ ತತ್ತ್ವಗಳನ್ನು ದೈನಂದಿನ ಬಾಳಿಗೆ ಸರಿಯಾಗಿ ರೂಢಿಸಿಕೊಂಡು ಮಾನವನ ಬದುಕನ್ನು ಉದಾತ್ತಗೊಳಿಸುವುದು ಹೇಗೆಂಬುದನ್ನು ಸುಲಭವಾಗಿ ಅರ್ಥವಾಗುವ ಭಾಷೆಯಲ್ಲಿ ನಿರೂಪಿಸುವ ಕಿರು ಹೊತ್ತಗೆಗಳು ಇಂದು ಬೇಕಾಗಿವೆ. ಈ ದೃಷ್ಟಿಯಿಂದ... ಪ್ರೊ. ಮಾಳವಾಡರ ಈ ಪುಸ್ತಕವು ಇತರರು ಅನುಸರಿಸ–ಬೇಕಾದಂತಹ ಒಂದು ಮೇಲ್ಪಂಕ್ತಿಯಾಗಿದೆ." 'ಶ್ರೀಅರವಿಂದ ಸ್ಮರಣೆ'ಯೆಂಬುದೂ ಶ್ರೀಯುತರು ರಚಿಸಿದ ಕಿರು ಹೊತ್ತಿಗೆಯೊಂದು. ಇಲ್ಲಿಯೇ ಸೌ. ಶಾಂತಾದೇವಿ ಮಾಳವಾಡರ 'ಓ ತಾಯಿ' ಎಂಬ ಕಿರು ಗವನದೊಳಗಿನ "ಆನಂದ ಜಲಧಿಯಲಿ ನಾ ಮಿಂದು ನಿಂದಿರುವೆ । ಶುದ್ಧ ಭಾವದ ಧೂಪವನ್ನೆ ಹಾಕಿರುವೆ ॥ ಸುಜ್ಞಾನವೆಂಬ ಬತ್ತಿಯ ದೀಪ ಹಚ್ಚಿರುವೆ । ಅರಿವೆಂಬ ಪರಿಮಳದ ಹೂವ ತಂದಿರುವೆ ॥ .. ಏಕಾಗ್ರತೆಯ ಮಂಟಪವನೆ ನಾ ರಚಿಸಿರುವೆ । ಆಕಾಂಕ್ಷೆಗಳ ರಂಗವಲ್ಲಿ ಇಕ್ಕಿರುವೆ ॥ ತೆರೆದಿರುವೆ ಹೃದಯ ದೇಗುಲದ ಕದವನು ನಾನು । ಹಗಲಿರುಳು ನಿನಗಾಗಿ ಕಾಯುತ್ತ ನಿಂತಿರುವೆ ॥" ಎಂಬ ಸಾಲುಗಳನ್ನು ನೆನೆಯುವುದು ಸಮುಚಿತವಾಗಿದೆ.

ಶ್ರೀ ಬೇಂದ್ರೆ: ಶ್ರೀ ಅರವಿಂದರು – ಶ್ರೀ ಮಾತೆಯವರು ಇವರ ಜೀವನಸೂತ್ರ. ಇದು ಇವರ ಪ್ರತಿ ಕೃತಿಯಲ್ಲಿಯೂ (ಅದು ದೈಹಿಕವೇ ಇರಲಿ, ಮಾನಸಿಕವೇ ಇರಲಿ, ಸಾಹಿತ್ಯಿಕವೇ ಇರಲಿ) ಹಾಸುಹೊಕ್ಕಾಗಿದೆ. ಶ್ರೀ ಅರವಿಂದರದು ಸಮನ್ವಯ ದೃಷ್ಟಿ; ಹಾಗೆಯೇ ಶ್ರೀ ಬೇಂದ್ರೆಯವರ ಕೃತಿಗಳಲ್ಲಿ ಶ್ರೀ ಅರವಿಂದರ

ಸೂತ್ರಕ್ಕನುಗುಣವಾಗುವಂತೆ ಪಾಶ್ಚಾತ್ಯ ಪೌರಸ್ತ್ಯ, ಅನುಭಾವಿಗಳ, ತತ್ತ್ವದರ್ಶಿಗಳ, ಕವಿಗಳ, ನಾಟಕಕಾರರ, ಸಾಧು–ಸಂತರ ಪ್ರಭಾವ ವಿಶೇಷಗಳು ಮಿಲಿತವಾಗಿ, ಅವು ಆ ಕೃತಿಗಳನ್ನು ಕಾಮನಬಿಲ್ಲಿನೋಪಾದಿಯಲ್ಲಿ ಬಹು ವರ್ಣರಂಜಿತವಾಗಿಸಿವೆ. ಆದರೂ ಅವರ ಪ್ರತ್ಯಕ್ಷ ಶ್ರೀ ಅರವಿಂದರ ಸಾಹಿತ್ಯ ಸೇವೆಯ ಈಷ ದರ್ಶನವನ್ನು ಮಾಡಿಸಲು ಇದರಡಿ ಪ್ರಯತ್ನಿಸಲಾಗಿದೆ.

ಶ್ರೀ ಅರವಿಂದರ ಮೇರುಕೃತಿ "The Life Divine (ಭಾಗವತ ಜೀವನ)"ದ 10 ಪ್ರಕರಣಗಳು ಸಾರಭೂತವಾಗಿ ಶ್ರೀ ಅರವಿಂದಾಶ್ರಮದಿಂದ ಪ್ರಕಟವಾಗುವ 'ದೀಪ್ತಿ' ಕನ್ನಡ ತ್ರೈಮಾಸಿಕದಲ್ಲಿ ಬಂದಿವೆ. ಅವರದೇ "The Renaissance in India (ಭಾರತೀಯ ನವಜನ್ಮ)" 1932ರಲ್ಲಿ 'ಮಧುರಚೆನ್ನ'ರು ಹಲಸಂಗಿಯಲ್ಲಿ ಪ್ರಾರಂಭಿಸಿದ ಶ್ರೀ ಅರವಿಂದ ಗ್ರಂಥಮಾಲೆಯಲ್ಲಿ ಪ್ರಥಮ ಪುಷ್ಪವಾಗಿ ಅರಳಿದೆ. ಮಧುರಚೆನ್ನರು ತೀರಿಹೋದ ತರುವಾಯ ಶ್ರೀ ಸಿಂಪಿ ಲಿಂಗಣ್ಣನವರು ಚಡಚಣದಿಂದ ಶ್ರೀ ಅರವಿಂದ ಗ್ರಂಥಮಾಲೆಯನ್ನು ನಡೆಯಿಸಿಕೊಂಡು ಬಂದಿದ್ದಾರೆ. ಹುಬ್ಬಳ್ಳಿಯಲ್ಲಿ ಪ್ರಾರಂಭವಾದ ಶ್ರೀ ಅರವಿಂದರ ಶ್ರೀಮಾತಾ ಮಂಡಲದ ಪರವಾಗಿ 'ಸಮರ್ಪಣ'ವೆಂಬ ವಾರ್ಷಿಕ ಪ್ರಕಟನೆಯು ಶ್ರೀ ಅರವಿಂದರ ಜೀವನ ದರ್ಶನದ ಪ್ರಕಾಶನಕ್ಕಾಗಿ 1950ರಲ್ಲಿ ಪ್ರಾರಂಭವಾಯಿತು. (ಇದರ ಮುಖ್ಯ ಸಂಪಾದಕರು ದಿವಂಗತ ಪ್ರೊ. ಅ. ವೆಂಕಪ್ಪ ಶಾಸ್ತ್ರಿಗಳು; ನಾನಾಗ ಹುಬ್ಬಳ್ಳಿಯಲ್ಲಿಯೇ ವಾಸವಾಗಿದ್ದೆನಾದ್ದರಿಂದ 'ಸಮರ್ಪಣ'ಕ್ಕೆ ರೂಪಕೊಡುವಲ್ಲಿ ಹಾಗೂ ಅದರ ಸಂಪಾದನದಲ್ಲಿ ನನಗೂ ತುಂಬಾ ಸೇವಾಸಂಧಿ ದೊರಕಿತು.) 1950 ರಿಂದ 1956ರ ಅವಧಿಯಲ್ಲಿ ಪ್ರಕಟವಾದ ಈ ವಾರ್ಷಿಕ ಸಂಪುಟಗಳಲ್ಲಿ 1/4 ಕ್ರೌನ್ ಆಕಾರದ ಸು. 2 ಸಾವಿರ ಪುಟಗಳಷ್ಟು ಉಚ್ಚ ಮಟ್ಟದ ಶ್ರೀ ಅರವಿಂದರ ಸಾಹಿತ್ಯ ಬಂದಿದೆ, ('ಮಂಡಲ'ದ ಪ್ರಾರಂಭ, ಅದರ ಮುನ್ನಡೆ, ಶ್ರೀ ಅರವಿಂದ ಸಾಹಿತ್ಯದ ಪ್ರಕಾಶನ–ಪ್ರಚಾರಾದಿಗಳಿಗೆ ತನು ಮನ ಧನದಿಂದ ಸಹಾಯ ಮಾಡಿದವರು ದಿವಂಗತ ಶ್ರೀ ನಾಡಿಗೇರ ಲಕ್ಷ್ಮಣರಾಯರು.)


... ಮುಂದುವರೆಯುತ್ತದೆ

# ಶ್ರೀ ಅರವಿಂದೋ ಕಾಂಪ್ಲೆಕ್ಸ್ ಟ್ರಸ್ಟ್

## ಪ್ರಕಟವಾಗಿರುವ ಪುಸ್ತಕಗಳ ಪಟ್ಟಿ

| ಕ್ರಮ ಸಂಖ್ಯೆ | ಕೃತಿ ಹೆಸರು |
|---|---|
| 1 | ಸಮಗ್ರ ಶಿಕ್ಷಣ |
| 2 | ಶ್ರೀ ಅರವಿಂದರು ದಿವ್ಯ ಜೀವನ |
| 3 | ಶ್ರೀ ಅರವಿಂದರು ಭಾರತೀಯ ಧರ್ಮ ಪರಂಪರೆ ಮತ್ತು ಭಗವಾನ್ ಶ್ರೀ ಅರವಿಂದರ ದರ್ಶನ |
| 4 | ಶ್ರೀ ಮಾತಾರವಿಂದರ ಪೂರ್ಣಯೋಗ |
| 5 | ಪ್ರಾರ್ಥನಾ ಪದ್ಯಗಳು |
| 6 | ರವಿ ಬೆಳಗಿದ ಪಥ (ಶ್ರೀಮಾತೆಯವರ ವಚನವೇದ ಸಂಕಲನ) |
| 7 | ನವ್ವೆಂಬರ್ 24, 1926 ಅಧಿಮಾನಸ ಪ್ರಜ್ಞೆಯ ಅವರೋಹಣ ಶ್ರೀ ಅರವಿಂದರ ಹಾಗೂ ಶ್ರೀಮಾತೆಯವರ ದೃಷ್ಟಿಯಲ್ಲಿ ಸಿದ್ಧಿದಿನದ ಮಹತ್ವ |
| 8 | ಶ್ರೀ ಅರವಿಂದರು (ಒಂದು ಸಂಕ್ಷಿಪ್ತ ಪರಿಚಯ) |
| 9 | ಶ್ರೀಮಾತೆ (ಒಂದು ಸಂಕ್ಷಿಪ್ತ ಪರಿಚಯ) |
| 10 | ಕೇಂಬ್ರಿಜ್‌ನ ಸುಗಂಧಿತ ಪುಷ್ಪ (ಮಾನವತೆಗೆ ಶ್ರೀ ಅರವಿಂದರ ಕೊಡುಗೆ) |
| 11 | ಅತಿಮಾನಸ ಹಾಗೂ ಹೊಸ ಜಗತ್ತೊಂದರ ಜನನ (ಶ್ರೀಮಾತೆ ಹಾಗೂ ಶ್ರೀ ಅರವಿಂದರ ಬರಹಗಳ ಸಂಕಲನ) |
| 12 | ಭಾರತ ಮತ್ತು ಭರತಮಾತೆಯ ದೈವನಿಯತಿ |
| 13 | ಆದರ್ಶ ಶಿಕ್ಷಕ |
| 14 | ಪೂರ್ಣಯೋಗ |
| 15 | ಶ್ರೀ ಅರವಿಂದರ ಧರ್ಮ ಹಾಗೂ ರಾಷ್ಟ್ರೀಯತ್ವ |
| 16 | ಶ್ರೀಮಾತೆಗೆ 72 (ಬಾಹತ್ತರ) ಕವನಗಳ ಅರ್ಪಣೆ |

| ಕ್ರಮ ಸಂಖ್ಯೆ | ಕೃತಿ ಹೆಸರು |
|---|---|
| 17 | ಶಿಕ್ಷಣ ಕುರಿತು ಶ್ರೀಮಾತಾರವಿಂದರ ವಿಚಾರಧಾರೆ |
| 18 | ಶ್ರೀ ಅರವಿಂದ ದರ್ಶನ |
| 19 | ಶ್ರೀಮಾತೆ ಭಾರತಮಾತೆ |
| 20 | ದುರ್ಗಾಸ್ತೋತ್ರ |
| 21 | ಚಿಂತನಗಳು ಮತ್ತು ಸೂಕ್ತಿಗಳು |
| 22 | ಯೋಗ ಸಮನ್ವಯ |
| 23 | ಶ್ರೀ ಅರವಿಂದಾಶ್ರಮ |
| 24 | ಪ್ರಸೂತಿ ಪೂರ್ವದ ಶಿಕ್ಷಣ ಶೋಭಾಯಮಾನ ಭವಿಷ್ಯತ್ತಿನೆಡೆಗೆ |
| 25 | ಮಗುವನ್ನು ಪೋಷಿಸುವುದು ಹೇಗೆ? |
| 26 | ಸುಪ್ರಮಾನಸದ ಶ್ರೀಮಾತೆ |
| 27 | ಸಾವಿತ್ರಿ (ಶ್ರೀ ಅರವಿಂದರ ಮಹಾಕಾವ್ಯದ ಸಾರಾಂಶ) |
| 28 | ಪೂರ್ಣಯೋಗದ ಪಥದಲ್ಲಿ |
| 29 | ಬೆಳಕಿನ ಕಿರಣಗಳು |
| 30 | 24th November 1926 (Descent of Overmental Consciousness) |
| 31 | ಶ್ರೀ ಅರವಿಂದರ ಸಾವಿತ್ರಿ |
| 32 | ಮಾನುಷ ಚಕ್ರ |
| 33 | ಚೈತ್ಯ ಪುರುಷ |
| 34 | ಭವಾನಿ ಭಾರತಿ |



ಸಾರೂಪ್ಯಗೊಳಿಸಲುದ್ಯುಕ್ತವಿರುವ ಆ ದೇವ ಸ್ಪರ್ಶ –ಹಸ್ತ
ದಾರುಣದ ಭರತವೀಯುತಲಿ ಸತತ ತಾನಿದ್ದರೂನು ಸತತ,
ಇದು ಚಿತ್ರಹಿಂಸೆಯಿದು ಘೋರ ಪೀಡೆ ಯಾತನೆಯ ಶೃಂಗ–ಶಿಖರ
ನಶ್ವರದ –ತಂತು–ಜಾಲಕಿದು ಈಗ ಸಹಿಸಲಾಗದೇ ಘೋರ

ಆ ಉಗ್ರ–ಶಕ್ತಿ ಒಳಗೊಳಗೆ ಬೆಳೆದು ಸಾಮರ್ಥ್ಯದುಂಬಿಕೊಂಡು
ದೈತ್ಯ ಯಾತನೆಯ ಪ್ರತಿ ಘಟನೆಯಲ್ಲು ಅತಿ ತೋಷ ತುಂಬಿ ತಂದು

**– ಪುಟ್ಟು ಕುಲಕರ್ಣಿ**

**(ಶ್ರೀ ಅರವಿಂದರ ‘ಸಾವಿತ್ರಿ’; ದಳ 6 ರೇಣು 2 ಪುಟ 444)**

Photo: Imaging Savitri

**RNI No. 22511/1971**
No. of Pages **48 + 4 (Cov. Page)**
KAR Reg No.: RNP/KA/BGS/368/2018-2020
Kannada Monthly Magazine
Date of Publication on 7th of Every Month
Permitted to Post 10th of Every Month. Reg. Valid till: 31-12-2020
Licensed to Post at BG PSO, Mysore Road, Bengaluru - 560 026



ಕಾಲದಾ ಛಿದ್ರ-ವಿಚ್ಛಿದ್ರ ಹರದಯವದು ಗೈದ ಸರ್ವ ಘಟನೆ
ಈಗಿದೋ ಶಮನಗೊಂಡಿಹವು ಮತ್ತೆ ಹಸಿರುಕ್ಕಿ ಪುಟಿದು ತಾನೆ,
ಬೆಂದ-ಬೇಗೆಯದು ದುಃಖ ದುಮ್ಮಾನ ಏನೊಂದು ಉಳಿಯದಿಹುದು
ಪ್ರಕೃತಿಯಾ ಹೃದಯದಲ್ಲೀಗ ಇವಕೆ ಏನೊಂದು ತಾಣ ಸಿಗದು
ಆತ್ಮವದು ತನ್ನ ತೇಜಮಯ ಕಿರಣ ಊಡುತಲಿ ಕಾಂತಿಗೊಳಿಸಿ
ಜಾಗ್ರದತ ದೇಹವನು ಮತ್ತೆ ಸ್ಪಂದ-ಛಂದದಲಿ ವರ್ಣಗೊಳಿಸಿ
ಭೂತ-ಭೌತಿಕದ ದ್ರವ್ಯ ತಾನದುವು ಚೈತನ್ಯದೊಡನೆ ಸ್ಪಂದ
ಸಂಲಗ್ನಗೊಂಡು ತನ್ಮಯತೆಯಲ್ಲಿ ಏಕತ್ವ ಭಾವ-ಛಂದ

**– ಪುಟ್ಟು ಕುಲಕರ್ಣಿ**

**(ಶ್ರೀ ಅರವಿಂದರ 'ಸಾವಿತ್ರಿ'; ದಳ 2 ರೇಣು 8 ಪುಟ 232)**

Ed. Sri Puttu Parashuram Kulkarni, Pub: Dr. Ajit Sabnis
Ptd. by M/s. Seshaasai e-forms Pvt. Ltd.,
on behalf of Sri Aurobindo Complex Trust, 'Sri Aurobindo Marg',
J.P. Nagar I Phase, Bengaluru - 560 078. Phone: 080 - 22449882.